ಸಂಪುಟ 01 | ಸಂಚಿಕೆ 33 | ಭಾನುವಾರ 14 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

### ಇಂಧನ ಶಕ್ತಿ ಉಳಿತಾಯ ದಿನ:

ಇಂಧನ ಶಕ್ತಿ ಉಳಿತಾಯ ದಿನವನ್ನು ಪ್ರತಿ ವರ್ಷ ಡಿಸೆಂಬರ್ 14 ರಂದು ಆಚರಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ಇಂಧನ ಸಂರಕ್ಷಣೆಯ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಇಂಧನವನ್ನು ಪರಿಣಾಮಕಾರಿಯಾಗಿ ಬಳಸಲು ಜನರನ್ನು ಪ್ರೋತ್ಸಾಹಿಸುವುದು. ಶಕ್ತಿಯ ವ್ಯರ್ಥವನ್ನು ಕಡಿಮೆ ಮಾಡುವುದು, ಹವಾಮಾನ ಬದಲಾವಣೆಯನ್ನು ತಡೆಯುವುದು ಮತ್ತು ಮುಂದಿನ ಪೀಳಿಗೆಗೆ ಹಸಿರು ಪರಿಸರವನ್ನು ಉಳಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ.

## ಸುಭಾಷಿತ

ನಮ್ಮ ಹಣೆಬರಹ ನಿರ್ಧರಿಸುವವರು ನಾವೇ
, ಅದಕ್ಕಾಗಿ ಯಾರನ್ನೂ ದೂರಬಾರದು
ಅಥವಾ ಯಾರನ್ನೂ ಶ್ಲಾಘಿಸಬಾರದು,

ಸ್ವಾಮಿ ವಿವೇಕಾನಂದ

# ಕೊಬ್ಬರಿ ಕನಿಷ್ಠ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಅನುಮತಿ, ರಾಜ್ಯದ ರೈತರಿಗೆ ಸಿಹಿ ಸುದ್ದಿ

**ಬೆಂಗಳೂರು: ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದ ಕೇಂದ್ರ ಸಚಿವ ಸಂಪುಟವು 2026ರ ಹಂಗಾಮಿನ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು (Mnimum Support Price) ಹೆಚ್ಚಿಸಲು ಅನುಮೋದನೆ ನೀಡಿದ್ದು, ರಾಜ್ಯದ ರೈತರಿಗೆ ಮತ್ತೊಮ್ಮೆ ಸಿಹಿ ಸುದ್ದಿ ನೀಡಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.**

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರ್ನಾಟಕದ ತೆಂಗು ಬೆಳೆಗಾರರಿಗೆ ಮೋದಿ ಸರ್ಕಾರವು ಹೊಸವರ್ಷದ ಕೊಡುಗೆಯಾಗಿ ಕೊಬ್ಬರಿ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಮಾಡಿದೆ ಎಂದು ಹೇಳಿದ್ದಾರೆ. ಕೇಂದ್ರದ ಈ ನಿರ್ಧಾರದಿಂದಾಗಿ ರಾಜ್ಯದ ತೆಂಗು ಬೆಳೆಗಾರರಿಗೆ ಹೆಚ್ಚಿನ ಲಾಭ ದೊರೆಯಲಿದ್ದು, ಹೋಳು ಕೊಬ್ಬರಿ ಮತ್ತು ಉಂಡೆ ಕೊಬ್ಬರಿ ಎರಡರ



ದರದಲ್ಲೂ ಗಮನಾರ್ಹ ಏರಿಕೆ ಮಾಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹೋಳು ಕೊಬ್ಬರಿಗೆ 445 ರೂ., ಉಂಡೆ ಕೊಬ್ಬರಿಗೆ 400 ರೂ. ಹೆಚ್ಚಳ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಹೋಳು ಕೊಬ್ಬರಿ ಕ್ವಿಂಟಾಲ್‌ಗೆ 2025ರಲ್ಲಿ 11,582 ರೂ. ಇದ್ದ ದರವು 2026ಕ್ಕೆ 12,027 ರೂ.ಗೆ ಏರಿಕೆಯಾಗಲಿದೆ. ಒಟ್ಟು 445 ರೂ. ಹೆಚ್ಚಳವಾಗಿದೆ ಎಂದು ಹೇಳಿರುವ ಅವರು, ಉಂಡೆ ಕೊಬ್ಬರಿ ಪ್ರತಿ ಕ್ವಿಂಟಾಲ್‌ಗೆ ಪ್ರಸ್ತುತ 12,100 ರೂ. ಇದ್ದು 2026ಕ್ಕೆ 12,500 ರೂ. ಏರಿಕೆಯಾಗಲಿದ್ದು, ಒಟ್ಟು 400 ರೂ. ಹೆಚ್ಚಳವಾಗಲಿದೆ ಎಂದು ತಿಳಿಸಿದ್ದಾರೆ. 2014ರಿಂದ ಕೇಂದ್ರ ಸರ್ಕಾರವು ಮಿಲ್ಲಿಂಗ್ ಕೊಬ್ಬರಿಯ ಎಂಎಸ್‌ಪಿಯನ್ನು ಗಣನೀಯವಾಗಿ ಹೆಚ್ಚಿಸುತ್ತಾ ಬಂದಿದ್ದು, 2014ರ ಮಾರುಕಟ್ಟೆ ಋತುವಿನಲ್ಲಿ ಕ್ವಿಂಟಲ್‌ಗೆ ಎಂಎಸ್‌ಪಿ 5,250 ರೂ. ಇತ್ತು. ಕಳೆದ 10 ವರ್ಷಗಳಲ್ಲಿ ಶೇ.129ರಷ್ಟು ಜಾಸ್ತಿ ಆಗಿದೆ. ಅದೇ ರೀತಿ ಉಂಡೆ ಕೊಬ್ಬರಿಯ ಬೆಲೆಯು ಕ್ವಿಂಟಲ್‌ಗೆ 5,500 ರೂ.ನಿಂದ 12,500 ರೂ.ಗೆ ಏರಿಕೆಯಾಗಿದ್ದು, ಶೇ.127 ರಷ್ಟು ಹೆಚ್ಚಳವಾಗಿದೆ ಎಂದು ಅವರು ವಿವರಿಸಿದ್ದಾರೆ.

## ಕರ್ನಾಟಕ ವಿದ್ಯಾರತ್ನ ರಾಷ್ಟ್ರ ಪ್ರಶಸ್ತಿಗೆ ಶ್ರೀ ವಿಶ್ವನಾಥ್ ಕೆ ಅಕ್ಕರಕಿ ಆಯ್ಕೆ

❏ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಹೈದರಾಬಾದಿನ ಸೆಂಟ್ರಲ್ ಫೈನ್ ಆರ್ಟ್ಸ್ ಫೌಂಡೇಶನ್ ಹಾಗೂ ಸ್ನೇಹ ಯೂತ್ ಕಲ್ಚರಲ್ ಅಸೋಸಿಯೇಷನ್ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 14-12-2025 ಭಾನುವಾರ ನಡೆಯುವ ಸೌತ್ ಇಂಡಿಯಾ ಡ್ಯಾನ್ಸ್ ಕಾಂಪಿಟೇಶನ್ ಕಾರ್ಯಕ್ರಮದಲ್ಲಿ ರಾಯಚೂರು ತಾಲೂಕಿನ ದೇವಸಗೂರಿನ ಶ್ರೀ ವಿಶ್ವನಾಥ್ ಕೆ ಅಕ್ಕರಕಿ ಇವರು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸುತ್ತಿರುವ ಇವರನ್ನು ಗುರುತಿಸಿದ ಸ್ನೇಹ ಯೂತ್ ಕಲ್ಚರಲ್ ಅಸೋಸಿಯೇಷನ್ ಬೆಂಗಳೂರು ರವರು ಶ್ರೀ ವಿಶ್ವನಾಥ್ ಕೆ ಅಕ್ಕರಕಿ ರವರು ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ವಿದ್ಯರತ್ನ ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ತಿಳಿಸಿ. ಸ್ನೇಹ ಯುತ್ ಕಲ್ಚರಲ್ ಅಸೋಸಿಯೇಷಿಯನ್ ಅಧ್ಯಕ್ಷರಾದ ರಂಜಿತ್ ಕುಮಾರ ತಿಳಿಸಿದರು.**



14-12-25 ಭಾನುವಾರ ಹೈದರಾಬಾದಿನಲ್ಲಿ ನಡೆಯುವ ಸೌತ್ ಇಂಡಿಯಾ ಡ್ಯಾನ್ಸ್ ಕಾಂಪಿಟೇಶನ್ ಕಾರ್ಯಕ್ರಮದ ಸುಂದರವಾದ ಭವ್ಯ ವೇದಿಕೆಯಲ್ಲಿ ಗಣ್ಯರ ಸಮ್ಮುಖದಲ್ಲಿ ಶ್ರೀ ವಿಶ್ವನಾಥ್ ಕೆ ಅಕ್ಕರಕಿ ಇವರಿಗೆ ಕರ್ನಾಟಕ ವಿದ್ಯಾ ರತ್ನ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಸ್ನೇಹ ಯೂತ್ ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷರಾದ ರಂಜಿತ್ ಕುಮಾರ್ ತಿಳಿಸಿದರು.

# ಮಕ್ಕಳ ಶೈಕ್ಷಣಿಕ ಪ್ರಗತಿ, ಶಿಸ್ತು, ಸಂಸ್ಕಾರ ಹಾಗೂ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೇ ಭದ್ರ ಅಡಿಪಾಯ ಶಾಸಕ ಹಂಪಯ್ಯ ನಾಯಕ್

❏ ನೈಜ್ಯ ದೇಸೆ ನ್ಯೂಸ್

**ಪೋತ್ನಾಳ: ಪೋತ್ನಾಳದ ಸ್ನೇಹ ಜ್ಯೋತಿ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ರಾಜ್ಯ ಯುವ ಕಾಂಗ್ರೆಸ್ ಮುಖಂಡರಾದ ಶ್ರೀ ರವಿ ಬೋಸರಾಜು ಹಾಗೂ , ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ. ಹಂಪಯ್ಯ ನಾಯಕ್ ಅವರು ಉದ್ಘಾಟಿಸಿದರು ನಂತರ ಉದ್ಘಾಟನಾ ಭಾಷಣವನ್ನು ಮಾಡಿದ ಮಾನ್ಯ ಶಾಸಕರು ನಮ್ಮ ಭಾಗದಲ್ಲಿ 2006ರಿಂದ ಈ ಒಂದು ಗ್ರಾಮದಲ್ಲಿ ಸ್ನೇಹ ಜ್ಯೋತಿ ಶಾಲೆಯನ್ನು ಪ್ರಾರಂಭಿಸಿ ಈ ಭಾಗದ ಶೈಕ್ಷಣಿಕಕ್ಕೆ**



**ಹೆಚ್ಚಿನ ಒತ್ತನ್ನು ನೀಡಿ ಈ ಭಾಗದ ಪ್ರಗತಿಗೆ ಸಾಕ್ಷಿಯಾಗಿದೆ ಸಂಸ್ಥೆ ಎಂದು ಹೇಳಿದರು.**

ಮಕ್ಕಳ ಶೈಕ್ಷಣಿಕ ಪ್ರಗತಿ, ಶಿಸ್ತು, ಸಂಸ್ಕಾರ ಹಾಗೂ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣವೇ ಭದ್ರ ಅಡಿಪಾಯ ಎಂದು ತಿಳಿಸಿದರು. ಶಾಲೆಗಳು ಕೇವಲ ಪಾಠಶಾಲೆಗಳಲ್ಲ, ಮಕ್ಕಳಲ್ಲಿನ ಪ್ರತಿಭೆ, ನಾಯಕತ್ವ ಮತ್ತು ಸಮಾಜಮುಖಿ ಚಿಂತನೆ ಬೆಳೆಸುವ ಕೇಂದ್ರಗಳಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಸ್ನೇಹ ಜ್ಯೋತಿ ಶಾಲೆಯ ಸೇವೆ ಶ್ಲಾಘನೀಯವಾಗಿದ್ದು, ಶಿಕ್ಷಕರ ಸಮರ್ಪಣೆ ಮತ್ತು ಪೋಷಕರ ಸಹಕಾರ ಶ್ಲಾಘನೀಯವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುವುದರೊಂದಿಗೆ ಅವರ ಭವಿಷ್ಯಕ್ಕೆ ದಾರಿ ತೋರಿಸುತ್ತವೆ ಎಂದು ಹೇಳಿ, ಎಲ್ಲಾ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯದ ಶುಭಾಶಯಗಳನ್ನು ಕೋರಿದರು.

ಈ ಸಂದರ್ಭದಲ್ಲಿ ಸೈಯದ್ ಖಾಲಿದ್ ಖಾದ್ರಿ, ಗ್ರಾಮ ಪಂಚಾಯಿತಿ ಅಧ್ಯಕ್ಷನಿ ಲಕ್ಷ್ಮಿ ಈರಣ್ಣ, ಸೈಯದ್ ನಜರುದ್ದೀನ್ ಖಾದ್ರಿ, ವಸಂತ್ ಕೊಡ್ಲಿ ರಾಜ ಸುಭಾಷ್ ಚಂದ್ರ ನಾಯಕ್ ಪಂಪನಗೌಡ ಪೋತ್ನಾಳ, ಚೆನ್ನಪ್ಪ, ಹಾಸನ ಭಾಷ್, ಮಹಾಂತೇಶ್ ನಾಯಕ್, ಖಾನ್ ಸಾಬ್, ಮೊದ್ದಿನ್ ಸಾಬ್, ಮಲ್ಲೇಶ್ ಜಗ್ಲಿ, ಚಂದ ಪಾಶ ಗುತೇದ್ದರಾರು,ಸ್ನೇಹ ಜ್ಯೋತಿ ಶಾಲೆಯ ಮುಖ್ಯೋಪಾಧ್ಯಾಯರು ಮಕ್ಕಳು ಉಪಸ್ಥಿತರಿದ್ದರು.

# ಜಲ ಜಾಗೃತಿ ಅಭಿಯಾನ :ಕವಿತಾಳ

❏ ನೈಜ್ಯ ದೇಸೆ ನ್ಯೂಸ್

**ಕವಿತಾಳ: ನದಿ ಮಾಲಿನ್ಯ ತಡೆದು ಭವಿಷ್ಯದ ಪೀಳಿಗೆಗೆ ಶುದ್ಧ ಜಲ ಸಂಪತ್ತು ಉಳೀಸುವ ಉದ್ದೇಶದಿಂದ ಜಲ,ಜನ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ನಿರ್ಮಲ ತುಂಗಭದ್ರಾ ಅಭಿಯಾನದ ಸಂಚಾಲಕ ಉದಯಕುಮಾರ ಸಾಹುಕಾರ್ ಹೇಳಿದರು.**

ನವದೆಹಲಿಯ ರಾಷ್ಟ್ರಿಯ ಸ್ವಾಭಿಮಾನ ಆದೋಲನ, ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಹಾಗೂ ಶಿವಮೊಗ್ಗದ ಮರ್ಯಾವರಣ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ಪಾದಯಾತ್ರೆ ಮೂಲಕ ಜನ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು. ‘ಪ್ರತಿಯೊಬ್ಬ ನಾಗರೀಕರು ಹಾಗೂ ಯುವಜನ ಉತ್ಸಾಹ ಮತ್ತು ಸಕ್ರಿಯತೆಯಿಂದ ಪಾದಯಾತ್ರೆಗೆ




ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ, ಕೇವಲ ತುಂಗಭದ್ರಾ ಉಳಿಸಲು ಮಾತ್ರ ಸೀಮಿತವಾಗದೆ ಜಲಮೂಲದ ರಕ್ಷಣೆಗೆ ಮತ್ತು ನೀರಿನ ಮಿತ ಬಳಕೆಯ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಎಂದರು.

ಸಮಿತಿಯ ನಾಗೇಶ್ವರ ನಾಯಕ, ಸ್ಥಳಿಯ ಮುಖಂಡರಾದ ಓವಣ್ಣ, ಶರಣಬಸವ ಹಣಗಿ, ರಾಜೇಶ ಬನ್ನಿಗಿಡ, ನೀಲಕಂಠ, ಸಂತೋಷ್ ಕಲ್‌ಶೆಟ್ಟಿ,ಯಾಕೂಬ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಿರ್ಮಲ ತುಂಗಭದ್ರಾ ಅಭಿಯಾನ

❏ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ತುಂಗಭದ್ರಾ ನದಿಯ ಮಾಲಿನ್ಯದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ನದಿಯನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ ನೇತೃತ್ವದಲ್ಲಿ ’ನಿರ್ಮಲ ತುಂಗಭದ್ರಾ ಅಭಿಯಾನ’ದ ಮೂರನೇ ಹಂತದ ಪಾದಯಾತ್ರೆ ಇದೀಗ ಮಹತ್ವದ ಘಟ್ಟ ತಲುಪಿದೆ.**

ಗಂಗಾವತಿಯಿಂದ ಮಂತ್ರಾಲಯದ ತನಕ ಈ ಹಂತದ ಪಾದಯಾತ್ರೆ ನಡೆಯಲಿದೆ. ಇದರ ಭಾಗವಾಗಿ ಅಭಿಯಾನದ ತಂಡದ ಸದಸ್ಯರು ಶನಿವಾರ ನಗರದ ಸರ್ವೋದಯ ಶಿಕ್ಷಣೆ ಸಂಸ್ಥೆಗೆ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.



ಸಮೀಕ್ಷಾ ವರದಿಯು ತೀವ್ರ ಆತಂಕ ಮೂಡಿಸಿದ್ದು, ನದಿ ನೀರಿನಲ್ಲಿ ಅಲ್ಯೂಮಿನಿಯಂ ಅಂಶ ಮತ್ತು ಇತರೆ ವಿಷಕಾರಿ ತ್ಯಾಜ್ಯಗಳು ಮಿತಿಮೀರಿರುವುದು ದೃಢಪಟ್ಟಿದೆ.

ನದಿಗೆ ಒಳಚರಂಡಿ ಮತ್ತು ಕೈಗಾರಿಕಾ ತ್ಯಾಜ್ಯಗಳು ನಿರಂತರವಾಗಿ ಸೇರುತ್ತಿರುವುದರಿಂದ, ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳದಿದ್ದರೆ, ತುಂಗಭದ್ರಾ ನದಿಯು ಬೆಂಗಳೂರಿನ ಸಂಪೂರ್ಣ ಕಲುಷಿತಗೊಂಡ ವೃಷಭಾವತಿ ನದಿಯಂತಾಗುವ ಅಪಾಯವಿದ್ದು ಈ ಹೋರಾಟದಲ್ಲಿ ರೈತರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಪರಿಸರ ಪ್ರಿಯರು ಸಕ್ರಿಯವಾಗಿ ಪಾ

# ಈಡಿಗ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ 700 ಕಿ.ಮೀ. ಐತಿಹಾಸಿಕ ಪಾದಯಾತ್ರೆ: ಡಾ.ಪ್ರಣವಾನಂದ ಸ್ವಾಮೀಜಿ

❏ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಕರ್ನಾಟಕ ರಾಜ್ಯದಲ್ಲಿ ಈಡಿಗ ಬಿಲ್ಲವ, ನಾಮಧಾರಿ, ಧೀವರ, ತೀಯ ಸೇರಿ, 26 ಒಳ ಪಂಗಡಗಳ ಸಮಾಜದ ಬೇಡಿಕೆ ಈಡೇರಿಕೆಗಾಗಿ ಜ.6 ರಿಂದ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದಿಂದ ಕರದಾಳದಿಂದ ಬೆಂಗಳೂರಿನವರೆಗೆ 700 ಕಿ.ಮೀ.41ದಿನ ಐತಿಹಾಸಿಕ ಪಾದಯಾತ್ರೆ ನಡೆಯಲಿದೆ ಎಂದು ಡಾ.ಪ್ರಣವಾನಂದ ಪರಮಪೂಜ್ಯ ಸ್ವಾಮಿಜಿ ತಿಳಿಸಿದರು.**

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ 40 ರಿಂದ 50 ಲಕ್ಷ ಜನರಿದ್ದೇವೆ, ಮಂಗಳೂರು, ಶಿವಮೊಗ್ಗ, ಉಡುಪಿ, ಕಾರವಾರ, ಜಿಲ್ಲೆಗಳಲ್ಲಿ ದೊಡ್ಡಮಟ್ಟದ ಸಮುದಾಯವಿದೆ. 23 ವಿಧಾನಸಭಾ ಕ್ಷೇತ್ರದಲ್ಲಿ 17 ವಿಧಾನಸಭಾ ಕ್ಷೇತ್ರದಲ್ಲಿ 1 ರಿಂದ 1.50 ಲಕ್ಷ ಜನರಿರುವ ಸಮುದಾಯವಾಗಿದೆ. ಈಗಿನ ಆಡಳಿತ ಪಕ್ಷದಲ್ಲಿ



4 ಜನ ಶಾಸಕರು, 2 ಜನ ಎಂಎಲ್ಸಿ, ಜೊತೆಗೆ ಒಬ್ಬರು ಮಂತ್ರಿ ಇದ್ದಾರೆ. ಈಡಿಗ ಸಮುದಾಯದ ಕುಲ ಕಸುಬು ಸೇಂದಿ ಇಳಿಸಿ ಮಾರಾಟ ಮಾಡಿ ಬದುಕುವ ಸಮಾಜ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಿನ ಅಬಕಾರಿ ಸಚಿವರಾಗಿದ್ದಾಗ ಸೇಂದಿಯಲ್ಲಿ ಸಿ.ಎಚ್.ಪೌಡರ್ ಹಾಕಿ ಮಾರಾಟ ಮಾಡುವುದು ಅಪರಾಧವೆಂಬ ಒಂದೇ ನೆಪವೊಡ್ಡಿ ಸಮಾಜದ ಕುಲ ಕಸುಬನ್ನೇ ಬಂದ್ ಮಾಡಿದರು.

ಆದರೆ ಯಾವುದೇ ಪರ್ಯಾಯದ ವ್ಯವಸ್ಥೆ ಮಾಡಲಿಲ್ಲ ರಾಜ್ಯದಲ್ಲಿ ನಿಕ್ಕರ್, ಪಬ್, ಗುಟ್ಕಾ, ಎಲ್ಲವೂ ಇದೆ, ಇದ್ಯಾಯಾವುದನ್ನು ಬಂದ್ ಮಾಡದೇ, ಬರೀ ಸೇಂದಿಯನ್ನಷ್ಟೇ ಬಂದ್ ಮಾಡಿ, ಸಮಾಜವನ್ನು ಆರ್ಥಿಕವಾಗಿ ಕುಗ್ಗುವಂತೆ ಮಾಡಿದರು. ಹೀಗಾಗಿ 2004 ರಿಂದ ಸೇಂದಿ ಮಾರಾಟ ನಿಂತು ಹೋಯಿತು. 2007 ರಲ್ಲಿ ಕುಮಾರಸ್ವಾಮಿ ಸರ್ಕಾರ ಸರಾಯಿ ಕೂಡ ಬಂದ್ ಮಾಡಿತು. ಈ ಕಾರಣದಿಂದ ಕಲ್ಯಾಣ ಕರ್ನಾಟಕದ ಈಡಿಗರು ಸಂಪೂರ್ಣವಾಗಿ ಬಡತನಕ್ಕೆ ಒಳಪಟ್ಟರು. ಇದಕ್ಕೆಲ್ಲ ಕಾರಣ ಸರ್ಕಾರ ಜೊತೆಗೆ ಒಂದಷ್ಟು ನಮ್ಮ ಸಮುದಾಯದ ಮೇಲ್ವರ್ಗದವರು ಕಾರಣವಾಗಿದ್ದಾರೆ. ಹೀಗಾಗಿ ನಿರಂತರವಾಗಿ 5 ವರ್ಷಗಳಿಂದ ರಾಜ್ಯದಲ್ಲಿ ಅಷ್ಟೇ ಅಲ್ಲದೇ, 6 ರಾಜ್ಯಗಳಲ್ಲಿಯೂ ಸಹ ಹೋರಾಟ ನಡೆಸಿದ್ದೇವೆ, 2023 ರಲ್ಲಿ ಮಂಗಳೂರಿನಿಂದ ಹಿಡಿದು ಬೆಂಗಳೂರಿನವರೆಗೆ ಐತಿಹಾಸಿಕ ಪಾದಯಾತ್ರೆಯನ್ನು ಕೂಡ ನಡೆಸಿದ್ದೇವು,

ಈ ನಿಟ್ಟಿನಲ್ಲಿ ಮತ್ತೆ ಈಡಿಗ ಸೇರಿದಂತೆ ಎಲ್ಲಾ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ ಐತಿಹಾಸಿಕ ಪಾದಯಾತ್ರೆ ನಡೆಸಲು ತೀರ್ಮಾನಿಸಿದ್ದೇವೆ, ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಬಿಡುಗಡೆ ಮಾಡಬೇಕು, ಈಡಿಗ ಸಮಾಜಕ್ಕೆ 5 ಎಕರೆ ಜಮೀನು ಪ್ರತಿ ಕೊಡಬೇಕು, 2ಎ ಯಿಂದ ಎಸ್.ಟಿ ಮೀಸಲಾತಿಗೆ ಸೇರಿಸಬೇಕು, ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿ ವಿಧಾನಸೌಧದ ಎದುರುಗಡೆ ಸ್ಥಾಪಿಸಬೇಕು, ಮದ್ಯ ಮಾರಾಟದಲ್ಲಿ ಈಡಿಗ ಸಮಾಜದ ಸೇರಿದಂತೆ 26 ಪಂಗಡಗಳಿಗೆ ಶೇ.50 ರಷ್ಟು ಮಿಸಲಾತಿ ನೀಡಬೇಕು ಹಾಗೂ ಶಿವಮೊಗ್ಗ ಜಿಲ್ಲೆಯ ಮುಳಗುಡೆ ಸಂತ್ರಸ್ತರಿಗೆ ಸೂಕ್ತ ಪರಿಹಾರವಾಗಿ ಮನೆ ಹಾಗೂ ಜಮೀನು ನೀಡುವುದು ಸೇರಿದಂತೆ ಒಟ್ಟು 18 ಬೇಡಿಕೆಗಳು ಈಡೇರಿಕೆಗಾಗಿ ಒತ್ತಾಯಿಸಿ ಮನವಿ ಸಲ್ಲಿಸಿದರು. ಈ ವೇಳೆ: ಪವನ್ ಕುಮಾರ, ರಾಮಕೃಷ್ಣ, ಸುರೇಂದ್ರ, ಎಮ್.ಎನ್.ರಾಜಶೇಖರ್, ಪದ್ಮನಾಭ, ಶ್ರೀನಿವಾಸ, ಸೇರಿದಂತೆ ಪತ್ರಿಕಾಗೋಷ್ಠಿಯಲ್ಲಿ ಅನೇಕರಿದ್ದರು.

## ಸಾಹಿತ್ಯ ಸಿಂಚನ

ಬೆಳಕಿನೆಡೆಗೆ ನಡೆ ಮನವೇ

ಬರಿ ನೋವುಗಳೆಂಬ ನದಿಯನ್ನು ದಾಟಿ
ನಲಿವೆಂಬ ದಡ ಸೇರು ಮನವೇ
ಅಜ್ಞಾನದಿಂದ ಸುಜ್ಞಾನದ ಕಡೆಗೆ
ನಡಿ ನೀನು ಮೂಡ ಮನವೇ!!

ಕಮರಿ ಹೋದ ಕನಸುಗಳ ನೆನೆದು
ಮಾತು ಮರೆತು ಮೌನವಾಗಿ ಕೂರದೇ
ಉಸಿರು ಕಟ್ಟಿದ ಮನದ ಭಾವವನ್ನು ತೊರೆದು ಬಿಡು
ವಾಸ್ತವ ಬದುಕಿನಡೆಗೆ ಸಾಗಿಬಿಡು !!

ನಶ್ವರವಾದ ಜಗದಲ್ಲಿ ನೋವು ನಲಿವುಗಳು ಸಹಜ
ನೀನು ಅರಿತು ನಡೆ ಪರಮಾತ್ಮಕಡೆ ಮನುಜ
ನಮ್ಮನ್ನು ನಾವು ಅರಿತಾಗ ಬೆಳಕು ಮೂಡುವುದು
ಇನ್ನಾದರೂ ಸಾಗಲಿ ಜೀವನ ಬೆಳಕಿನಡಿಗೆ!!

ಕೂಡು ಮನವೇ ಸತ್ಯದ ಸದನದಲ್ಲಿ
ಬೆಳಕಿನ ದಾರಿ ತೋರುವನು ಭಗವಂತ
ಬಾಳಲಿ ಭರವಸೆ ಎಂಬ ಬೆಳಕು ಮೂಡಲಿ
ಸಾಗಲಿ ಸಾರ್ಥಕತೆಯಡೆಗೆ ಬದುಕು
ಬೆಳಕಿನಡೆಗೆ ನಡಿ ಮನವೇ!!

ಶ್ರೀಮತಿ ಕವಿತಾ ಹಿರೇಮಠ ಕವಿತಾಳ

# ಲೈಂಗಿಕ ಸೋಂಕಿನಿಂದ ಹರಡುವ ಸಿಫಿಲಿಸ್ ನಿರ್ಲಕ್ಷಿಸಿದರೆ ಅಪಾಯಕಾರಿಯಾಗಬಲ್ಲದು: ಡಾ ಮಹಮ್ಮದ್ ಶಾಕೀರ್,

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಕಣ್ಣಿಗೆ ಕಾಣದ ಸುರುಳಿಯಾಕಾರದ ಬ್ಯಾಕ್ಟೀರಿಯಂ ಟ್ರೆಪೋನೆಮಾ ಪ್ಯಾಲಿಡಮ್‌ನಿಂದ ಹರಡುವ ಇದು ಸಿಫಿಲಿಸ್ ಸೊಂಕು ಹುಣ್ಣಿನ ರೂಪದಲ್ಲಿ ಇದ್ದು ಅಸುರಕ್ಷಿತ, ಅಪರಿಚಿತರೊಂದಿಗಿನ ಲೈಂಗಿಕ ಸಂಪರ್ಕದಿಂದ ಒಬ್ಬರಿಂದ ಒಬ್ಬ-ರಿಗೆ ಹರುಡುವ ಸಾಧ್ಯತೆಯಿದ್ದು ಈ ದಿಶೇಯಲ್ಲಿ ವೈಯಕ್ತಿಕ ಕಾಳಜಿ ಅತ್ಯಂತ ಪ್ರಮುಖವಾಗಿದೆ ಎಂದು ಜಿಲ್ಲಾ ಡ್ಯಾಪ್ಕೋ ಹಾಗೂ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮೊಹೀಯುದ್ದಿನ್ ತಿಳಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಮೂಲಕ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಹೆಚ್‌ಐವಿ ಏಡ್ಸ್ ಯುವ ಜನೋತ್ಸವ ಅಡಿಯಲ್ಲಿ ಗರ್ಭಿಣಿ ತಾಯಂದಿ-ರಿಗೆ ವಿಶೇಷ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡುತ್ತಾ, ಸಾಮಾನ್ಯವಾಗಿ ಲೈಂಗಿಕ



ರೋಗಗಳು ಯಾರದೋ ತಪ್ಪಿಗೆ ಇನ್ನೊಬ್ಬ-ರಿಗೆ ಶಿಕ್ಷೆಯ ರೂಪದಲ್ಲಿ ಬರುತ್ತವೆ, ಅದರಲ್ಲೂ ಹೆಚ್‌ಐವಿ, ಸಿಫಿಲಿಸ್ ಪ್ರಮುಖವಾಗಿವೆ. ದೈಹಿಕ ಸಂಪರ್ಕದ ಸಮಯದಲ್ಲಿ ಸಿಫಿಲಿಟಿಕ್ ಹುಣ್ಣು ವಿನೊಂದಿಗೆ ನೇರ ಸಂಪರ್ಕದ ಮೂಲಕ ಹರಡುವುದಲ್ಲದೆ, ಸೊಂಕಿಗೆ ಒಳಗಾದಾಗ ಗರ್ಭಾವಸ್ಥೆಯಲ್ಲಿ ಸೋಂಕಿತ ತಾಯಿಯಿಂದ ಅವಳ ಮಗುವಿಗೆ ಸಹ ಹರಡಬಹುದು ಅದರಲ್ಲೂ ಹುಟ್ಟುವ ಮಗು ಸಹ ಜನ್ಮಜಾತ ಸಿಫಿಲಿಸ್‌ಗೆ ಕಾರಣವಾಗ ಬಹುದಾಗಿದೆ. ಮತ್ತು ಸಾಂಕ್ರಾಮಿಕ ಸೋಂಕು ರಕ್ತ ಮತ್ತು ದುಗ್ಧರಸದಿಂದ ದೇಹದಾದ್ಯಂತ ಹರಡಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಕಾರಣ ಜನನಾಂಗಗಳಲ್ಲಿ ದೀರ್ಘಕಾಲ ಹುಣ್ಣುಗಳು ಇದ್ದಲ್ಲಿ ನಿರ್ಲಕ್ಷಿಸದೆ ತಪ್ಪದೆ ತಜ್ಞ ವೈದ್ಯ-ರಿಂದ ಸಲಹೆ, ಅಗತ್ಯವಿದ್ದಲ್ಲಿ ಚಿಕಿತ್ಸೆ ಪಡೆದು ಸ್ವಾಸ್ಥ್ಯ ಸಮಾಜ ನಿರ್ಮಿಸಲು ವಿನಂತಿಸಿದರು. ಈ ಸಂದರ್ಭದಲ್ಲಿ ಮಕ್ಕಳ ತಜ್ಞರಾದ ಡಾ ಅನುಷಾ, ಜಿಲ್ಲಾ ಡ್ಯಾಪ್ಕೊ ಮೇಲ್ವಿಚಾರಕರ ಮಲ್ಲಯ್ಯ ಮಠಪತಿ ಮಾತನಾಡಿದರು.

ರೆಡಿಯಾಲಜಿಸ್ಟ್ ಡಾ ಭುವನೇಶ್ವರಿ, ಪ್ರಸೂತಿ ತಜ್ಞೆ ಡಾ ಪವಿತ್ರಾ ಪಾಟೀಲ್, ವೈದ್ಯಾಧಿಕಾರಿ ಡಾ ರಾಕೇಶ್, ಡಾ ಸುನೀತಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡ್ಯಾಪ್ಕೊ ವಿಭಾಗದ ಪುಷ್ಪಲತಾ, ಸಿಮಾಲತಾ, ಶಾಂತಕುಮಾರ, ರಾಮಚಂದ್ರ, ಸೇರಿದಂತೆ ತಾಯಂದಿರು ಹಾಗೂ ಇತರರು ಉಪಸ್ಥಿತರಿದ್ದರು.

# ಹೊಸ ವರ್ಷ ಸರ್ವರ ಬಾಳಿಗೆ ಸಮೃದ್ಧಿ ನೀಡಲಿ. ವಿಶ್ವನಾಥ ಹಿರೇಮಠ



❑ ನೈಜ್ಯ ದೇಸೆ ನ್ಯೂಸ್

ಭಾರತದ ವೈವಿಧ್ಯತೆಗೆ ಅನುಗುಣವಾಗಿ ನಡೆಯುವ ಅನೇಕ ಹಬ್ಬಗಳು, ಪ್ರಾದೇಶಿಕ ಆಚ-ರಣೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಇದರ ಜೊತೆಯಲ್ಲಿ ನಾಡಿನ ಹಬ್ಬ ಹರಿದಿನಗಳು. ಜಾತ್ರೆಗಳು. ಗಣ-ರಾಜ್ಯೋತ್ಸವ.ಸ್ವಾತಂತ್ರ್ಯ ದಿನಾಚರಣೆ. ಗಾಂಧಿ ಜಯಂತಿ-ಕ್ರಿಸ್‌ಮಸ್. ಸರ್ಕಾರಿ ರಜೆ ದಿನಗಳು. ದಾರ್ಶನಿಕರ ಜಯಂತಿಗಳು.


ಇವುಗಳು ದಿನಾಂಕಗಳನ್ನು ಮೊದಲೇ ನಿಗದಿಪಡಿಸಿರುವುದರಿಂದ, ನೀವು ದೀರ್ಘ ವಾರಾಂತ್ಯಗಳು ಅಥವಾ ಹಬ್ಬದ ರಜಾದಿನಗಳಲ್ಲಿ ರಜೆಗಳು, ಪ್ರವಾಸಗಳು ಅಥವಾ ಕುಟುಂಬ ಕಾರ್ಯಕ್ರಮಗಳನ್ನು ಯೋಜಿಸಬಹುದಾಗಿದೆ. ಮುಂಜಾಗ್ರತೆ ಪಡೆಯಲು ಮತ್ತು ತಿಳಿಯಲು ಕ್ಯಾಲೆಂಡರ್ ಮತ್ತು ಪಂಚಾಗಗಳು ಪ್ರತಿಯೊಬ್ಬರ ಬದುಕಿನಲ್ಲಿ ಅತ್ಯವಶ್ಯವಾಗಿವೆ. 2026 ನೂತನ ಹೊಸ ವರ್ಷ ಸರ್ವರಿಗೂ ಸುಖ ಶಾಂತಿ ಸಮೃದ್ಧಿ ತರಲಿ ಎಂದು ವಿಕಾಸ ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಹಿರೇಮಠರು.

ಸಿಂಧನೂರು ನಗರದ ಬಸವ ಸರ್ಕಲ್ ಹತ್ತಿರವಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಸೌಹಾರ್ದ ಸಹಕಾರಿಯ 2026 ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು. ಈ ಸಂಧರ್ಭದಲ್ಲಿ ಅಧ್ಯಕ್ಷ ಎಸ್ ಎಸ್ ಹಿರೇಮಠ, ಉಪಾಧ್ಯಕ್ಷ. ಬಸವರಾಜ ಸಣ್ಣಜಿನ್. ಸದಸ್ಯರಾದ ಸಯ್ಯದ್ ಖಲೀಲ್ ಅಹ್ಮದ್. ಆನಂದ ಹಿರೇಮಠ. ಲಿಂಗರಾಜ ಕರಡಕಲ್ಲ. ಶ್ರೀ ಮತಿ ಸಹನಾ ಹಿರೇಮಠ. ಶ್ರೀ ಮತಿ ಕವಿತಾ ಹಿರೇಮಠ. ಮ್ಯಾನೇಜರ್ ಲಿಂಗನಗೌಡ. ಸಿಬ್ಬಂದಿ ಅಕ್ಷಯ ಕುಮಾರ ಕುಲಕರ್ಣಿ. ಶೇಖರಪ್ಪ ಬಾಲಿ ಮತ್ತಿತರರು ಇದ್ದರು.

## ಆಳಂದ ಮತಗಳ್ಳತನ ಪ್ರಕರಣದ ಚಾರ್ಜ್ ಶೀಟ್ ಸಲ್ಲಿಕೆ

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಕರ್ನಾಟಕದ 2023 ರ ವಿಧಾನಸಭಾ ಚುನಾವಣೆಯಲ್ಲಿ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತ ಕಳ್ಳತನ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ, ಬಿಜೆಪಿ ಮಾಜಿ ಶಾಸಕ ಹಾಗೂ ಅವರ ಮಗ ಮತ್ತು ಅವರ ಆಪ್ತ ಸಹಾಯಕ ಸೇರಿದಂತೆ ಏಳು ಜನರನ್ನು ಹೆಸರಿಸಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.**



ಬೆಂಗಳೂರಿನ ಮೊದಲ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮುಂದೆ ವಿಶೇಷ ತನಿಖಾ ತಂಡ ಸಲ್ಲಿಸಲಾದ ಚಾರ್ಜ್‌ಶೀಟ್‌ನಲ್ಲಿ 5,994 ಮತದಾರರ ಹೆಸರುಗಳನ್ನು ತೆಗೆದುಹಾಕಲು ಪ್ರಯತ್ನಿಸಲಾಗಿದೆ ಎಂದು ಆರೋಪಿಸಲಾಗಿದೆ. ಸಿಐಡಿ ಮೂಲಗಳ ಪ್ರಕಾರ, ಚಾರ್ಜ್‌ಶೀಟ್ 22 ಸಾವಿರಕ್ಕೂ ಹೆಚ್ಚು ಪುಟಗಳನ್ನು ಹೊಂದಿದ್ದು, ಮತದಾರರ ಹೆಸರುಗಳನ್ನು ಅಳಿಸಲು ಅಳವಡಿಸಿಕೊಂಡ ವಿಧಾನವನ್ನು ವಿವರವಾಗಿ ವಿವರಿಸುತ್ತದೆ. ಆರೋಪ ಪಟ್ಟಿಯಲ್ಲಿ ಹೆಸರಿಸಲಾದವರು ಆಳಂದದ ನಾಲ್ಕು ಬಾರಿ ಮಾಜಿ ಶಾಸಕ ಸುಭಾಷ್ ಗುತ್ತೇದಾರ್‌ಅವರ ಮಗ ಹರ್ಷಾನಂದ ಗುತ್ತೇದಾರ್,ಅವರ ಆಪ್ತ ಕಾರ್ಯದರ್ಶಿ ತಿಪ್ಪೇರುದ್ರ, ಕಲಬುರಗಿ ಮೂಲದ ಮೂವರು ಡೇಟಾ ಸೆಂಟರ್ ನಿರ್ವಾಹಕರಾದ ಅಕ್ರಮ್ ಪಾಷಾ, ಮುಕರಾಮ್ ಪಾಷಾ ಮತ್ತು ಮೊಹಮದ್ ಅಶ್ಫಾಕ್ ಮತ್ತು ಪಶ್ಚಿಮ ಬಂಗಾಳದ ಬಾಪಿ ಆದ್ಯಾ ಇದ್ದಾರೆ. ಈ ಪ್ರಕರಣದಲ್ಲಿ ಬಂಧಿಸಲ್ಪಟ್ಟ ಮೊದಲ ವ್ಯಕ್ತಿ ಆದ್ಯಾ. ಅವರು ಒಟಿಪಿ ಬೈಪಾಸ್ ಸೌಲಭ್ಯವನ್ನು ಒದಗಿಸಲು ಅಮೆರಿಕ ಮೂಲದ ವೇದಿಕೆಯೊಂದಿಗೆ ಸಂಪರ್ಕ ಹೊಂದಿದ್ದ ಒಟಿಪಿ ಬಜಾರ್ ಎಂಬ ವೆಬ್‌ಸೈಟ್ ಅನ್ನು ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ. ನಂತರ ಅವರು ಜಾಮೀನು ಪಡೆದಿದ್ದರೆ ಈಗಾಗಲೇ ವಿಶೇಷ ನ್ಯಾಯಾಲಯವು ಈ ಹಿಂದೆ ಗುತ್ತೇದಾರ್ ಅವರ ಮಗ ಮತ್ತು ತಿಪ್ಪೇರುದ್ರ ಅವರಿಗೆ ನಿರೀಕ್ಷಣಾ ಜಾಮೀನು ನೀಡಿತ್ತು ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ ಚಾರ್ಜ್‌ಶೀಟ್ ಬಗ್ಗೆ ಪ್ರತಿಕ್ರಿಯೆ ನೀಡಿರುವ ಹರ್ಷಾನಂದ ಅವರು, ತಮ ವಿರುದ್ಧದ ಆರೋಪಗಳನ್ನು ಪಿತೂರಿ ಎಂದು ಟೀಕಿಸಿದ್ದಾರೆ. ರಾಜಕೀಯ ದ್ವೇಷದಿಂದ ನನ್ನ ತಂದೆಯನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಹೇಳಿದರು.

# ಮಸ್ಕಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ಸದಸ್ಯತ್ವ ನೊಂದಣಿ ಅಭಿಯಾನ ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಸಂಘಟನೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಿ: ಬಸವರಾಜ

❑ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಪಟ್ಟಣದ ಸರ್ಕ್ಯೂಟ್ ಹೌಸ್ ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ಸಂಘಟನೆ ವತಿಯಿಂದ ತಾಲೂಕ ಮಟ್ಟದ ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ತಾಲೂಕು ಪ್ರಧಾನ ಸಂಚಾಲಕ ಬಸವರಾಜ್ ಕೊಠಾರಿ ಚಾಲನೆ ನೀಡಿದರು.**

ನಂತರ ಮಾತನಾಡಿದ ಅವರು ನಮ್ಮ ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಂಘಟನೆಯನ್ನು ಗಟ್ಟಿಗೊಳಿಸಲು ತಾಲೂಕಿನಲ್ಲಿ ಹೆಚ್ಚು ಹೆಚ್ಚು ಜನರು ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕೆಂದು ತಿಳಿಸಿದರು ಅದೇ




ರೀತಿಯಾಗಿ ಮುಂದಿನ ದಿನಮಾನಗಳಲ್ಲಿ ಮಸ್ಕಿ ತಾಲೂಕಿನಲ್ಲಿ ಮಹಿಳೆಯರು ಯುವಕರು ಸದಸ್ಯತ್ವ ನೊಂದಣಿ ಮಾಡಿಕೊಳ್ಳಲು ಮುಂದೆ ಬರಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಸ್ಕಿ ತಾಲೂಕಿನ ಮಹಿಳಾ ಪ್ರಧಾನ ತಾಲೂಕ ಸಂಘಟನೆ ಪ್ರಧಾನ ಸಂಚಾಲಕರಾಗಿ ಸುಮಿತ್ರ ಸಾಗರ ಕ್ಯಾಂಪ್ ಇವರನ್ನು ಆಯ್ಕೆ ಮಾಡಲಾಯಿತು ಮಹಿಳೆಯರು ಹೆಚ್ಚು ಹೆಚ್ಚು ಸದಸ್ಯತ್ವ ನೋಂದಣಿ ಮಾಡಬೇಕೆಂದು ತಿಳಿಸಲಾಯಿತು ಕಾರ್ಯಕ್ರಮದಲ್ಲಿ ಕಲ್ಬುರ್ಗಿ ವಿಭಾಗಿ ಸಂಚಾಲಕರಾದ ಚನ್ನಪ್ಪ ಹೆಡಿಗಿಬಾಳ, ನಾಗಪ್ಪ ದಿನಸಮುದ್ರ, ಪರಶುರಾಮ್ ಹುಸ್ಕಿಹಾಳ್, ಹುಲಿಗೇಶ್ ಮುರಾರಿ, ಚಂದಪ್ಪ ಹಾಲಾಪುರ್, ಅರುಣ್ ಕುಮಾರ್ ಸಾಗರ್ ಕ್ಯಾಂಪ್, ಸೋಮಣ್ಣ ಮೇಟಿ, ರಾಮಣ್ಣ ಮಸ್ಕಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ಮಸ್ಕಿ ಶಾಸಕ ಆರ್ ಬಸನಗೌಡ ತುರ್ವಿಹಾಳರಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿ ಗೆ ಚಾಲನೆ ಗ್ರಾಮೀಣ ಭಾಗಗಳಿಗೂ ಮೂಲಸೌಕರ್ಯ ಒದಗಿಸಲು ಆದ್ಯತೆ: ಶಾಸಕ ತುರ್ವಿಹಾಳ



❑ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಕ್ಷೇತ್ರದ ಸಮಗ್ರ ಹಾಗೂ ಸಮತೋಲನದ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, ಗ್ರಾಮೀಣ ಭಾಗಗಳಿಗೂ ಸಮಾನವಾಗಿ ಮೂಲಸೌಕರ್ಯ ಒದಗಿಸಲಾಗುತ್ತಿದೆ ಎಂದು ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರ್ವಿಹಾಳ ಶನಿವಾರ ಹೇಳಿದರು.**

ತಾಲ್ಲೂಕಿನ ಮೆರನಾಳ, ಗೋನಾಳ, ಹರ್ವಾಪೂರ, ಮುದಬಾಳ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಶಾಶ್ವತ ಪರಿಹಾರ ಒದಗಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು. ಗ್ಯಾರಂಟಿ ಯೋಜನೆಗಳ ಮೂಲಕ ಬಡವರು, ರೈತರು ಹಾಗೂ ಕಾರ್ಮಿಕ ವರ್ಗದ ಬದುಕು ಸುಧಾರಣೆಯಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪುರ, ಕಾಂಗ್ರೆಸ್ ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರ, ಪಂಪನಗೌಡ ಪಾಟೀಲ ಗುಡದೂರು, ಕ್ಯಾಷುಟೆಕ್ ಎಂಜಿನಿಯರ್ ತಿಮ್ಮಣ್ಣ ಉಪ್ಪಾರ ಸೇರಿದಂತೆ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಪತ್ರಕರ್ತರೊಂದಿಗೆ ಸಂವಾದ ನಡೆಸಿದ ಎಂಎಲ್ಸಿ ಬಸನಗೌಡ ಬಾದರ್ಲಿ

❑ ನೈಜ್ಯ ದೇಸೆ ನ್ಯೂಸ್

**ನಗರದ ಖಾಸಗಿ ಹೊಟೇಲ್ ನಲ್ಲಿ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿಯವರು ನವ ಸಂಕಲ್ಪ ನವ ಸಿಂಧನೂರು ಎಂಬ ಘೋಷ್ಯ ವಾಕ್ಯದಡಿಯಲ್ಲಿ ನನ್ನ ಕನಸಿನ ಸಿಂಧನೂರು ಹೇಗಿರಬೇಕು ಎಂಬುದರ ಕುರಿತು ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಲಾಯಿತು.**

ಹಿರಿಯ ಪತ್ರಕರ್ತರು ನಾಮಫಲಕ ಅನಾವರಣ ಹಾಗೂ ಯುವ ಪತ್ರಕರ್ತರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ನನ್ನ ಕನಸಿನ ಸಿಂಧನೂರು ಹೇಗಿರಬೇಕು ಎನ್ನುವ ಕುರಿತು



ಹಲವಾರು ಪತ್ರಕರ್ತರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಪ್ರಮುಖವಾಗಿ ರೈತರ ಸಮಸ್ಯೆ, ರೈತರ ಸಮಸ್ಯೆಗೆ ಪರಿಹಾರ, ನಿರುದ್ಯೋಗ ಮತ್ತು ಸಮಸ್ಯೆಗೆ ಪರಿಹಾರ, ಶೈಕ್ಷಣಿಕವಾಗಿ ಯಾವರೀತಿ ಅಭಿವೃದ್ಧಿ ಗೊಳ್ಳಬೇಕು, ತುಂಗಭದ್ರಾ ಜಲಾಶಯ ಉಳಿವಿಗಾಗಿ ಮಾಡಬೇಕಾದ ಮಾರ್ಗ ಸೂಚಿ ಹಾಗೂ ನವಲಿ ಜಲಾಶಯ ನಿರ್ಮಿಸಲು ಇರುವ ಅಡೆ ತಡೆಗಳ ಬಗ್ಗೆ ಚರ್ಚಿಸಲಾಯಿತು.

ಜೊತೆಗೆ ಸ್ಥಳೀಯವಾಗಿ ಧೂಳು ಮುಕ್ತ ಸಿಂಧನೂರು ಮಾಡುವುದು ಹೇಗೆ ನಗರಸಭೆ ಯಾವರೀತಿ ಕಾರ್ಯ ನಿರ್ವಹಿಸುತ್ತದೆ, ಹಾಗೂ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಸೇವೆಯನ್ನು ಮರೆತು ಜಾತ್ರೆ, ಉತ್ಸವ, ಯಶಸ್ವಿ ಹೆಸರಿನಲ್ಲಿ, ಮತ್ತು ವಿಡಿಯೋ ಕಾನ್ಫರೆನ್ಸ್ ಹೆಸರಿನಲ್ಲಿ ಜನರಿಗೆ ಮಾಡುತ್ತಿರುವ ಸಮಸ್ಯೆಗಳ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಿ, ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯ, ಸಾರಿಗೆ ಸಂಸ್ಥೆಯ ಸೌಲಭ್ಯ, ಸೇರಿದಂತೆ ಪೊಲೀಸ್ ಇಲಾಖೆ ಅಕ್ರಮ ಚಟುವಟಿಕೆ ತಡೆಗಟ್ಟಲು ಎಷ್ಟರಮಟ್ಟಿಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಿವಿಲ್ ಪ್ರಕರಣಗಳಲ್ಲಿ ಏಕೆ ಮಧ್ಯೆ ಪ್ರವೇಶಿಸುತ್ತಿದ್ದಾರೆ ಎನ್ನುವ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು. ಈ ವೇಳೆ: ಕಾಂಗ್ರೆಸ್ ಪಕ್ಷದ ಮುಖಂಡರು, ಹಲವಾರು ಪತ್ರಕರ್ತರು ಸಂವಾದದಲ್ಲಿ ಭಾಗವಹಿಸಿ ಅಭಿಪ್ರಾಯ ಹಂಚಿಕೊಂಡರು.

## ನೇಮಕಾತಿ ಪ್ರಕಟಣೆ

DECEMBER 14 WCD ಕರ್ನಾಟಕ ನೇಮಕಾತಿ 2025 ? 4 ಕಾರ್ಯದರ್ಶಿ ಸಹಾಯಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಘಅಆ ಕರ್ನಾಟಕ ನೇಮಕಾತಿ 2025: 4 ಕಾರ್ಯದರ್ಶಿ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಡಿಸೆಂಬರ್ 2025 ರ ಘಅಆ ಕರ್ನಾಟಕ ಅಧಿಕೃತ ಅಧಿಸೂಚನೆಯ ಮೂಲಕ ಕಾರ್ಯದರ್ಶಿ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 23–ಡಿಸೆಂಬರ್–2025 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. Official Website: dwcd.karnataka.gov.in ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23–ಡಿಸೆಂಬರ್–2025

## ಸಿಂಧನೂರು ಶ್ರೀ ಕಾಳಿಕಾದೇವಿ ದೇವಸ್ಥಾನ ಶಂಕು ಸ್ಥಾಪನೆ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು ನಗರದ ಬಡೀಬೇಸ್ ಕಾಲೋನಿಯ ಪುರಾತನ ಕಾಲದ ಶ್ರೀ ಕಾಳಿಕಾದೇವಿ ದೇವಸ್ಥಾನವನ್ನು ಜೀರ್ಣದ್ದಾರ ಕಾರ್ಯಕೈಗೊಳ್ಳಲು ಸಿಂಧನೂರು ತಾಲೂಕ ವಿಶ್ವಕರ್ಮ ಸಮಾಜದ ವತಿಯಿಂದ ಶ್ರೀ ವೇ ಮೂ ನಾಗಲಿಂಗಚಾರ್ಯ ಬೇವಿನಹಾಳ ಇವರ ಪುರೋಹಿತ್ಯದಲ್ಲಿ ಹೋಮ– ಹವನ ಕಾರ್ಯಕ್ರಮ,ತಾಯಿ ಶ್ರೀ ಕಾಳಿಕಾದೇವಿ ಮೂರ್ತಿ ಸ್ಥಾನ ಪಲ್ಲಟ ಹಾಗೂ ಭೂಮಿ ಶಂಕು ಸ್ಥಾಪನೆ ಕಾರ್ಯಕ್ರಮ ಅತ್ಯಂತ ಅಚ್ಚುಕಟ್ಟಾಗಿ ತರ್ಕಬದ್ದವಾಗಿ ವಿಜೃಂಭಣೆಯಿಂದ ಜರುಗಿತು.ಬೆಳಗ್ಗೆ ಶ್ರೀ ಕಾಳಿಕಾದೇವಿಗೆ ವಿಶೇಷ ಪೂಜೆ,ಹೋಮ–ಹವನ ಕಾರ್ಯಕ್ರಮ ನೆರವೇ–ರಿತು.ಇದೇವೇಳೆ ಭಕ್ತಾಧಿಗಳು ತಮ್ಮ ಇಷ್ಟಾರ್ಥ ಸಿದ್ದಿಗಳು ಈಡೇರಲೆಂದು ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು.ನಂತರ ಮಹಾಪ್ರಸಾದ ನೆರವೇರಿತು.**

ಈ ಸಂಧರ್ಭದಲ್ಲಿ ಶ್ರೀ ವೆಂಕಟೇಶ್ವರ ಮಹಾಸ್ವಾಮಿಗಳು ಏಕದಂಡಗಿ ಮಠ ಶಾಡಲಗೇರಿ,ಅಯ್ಯಪ್ಪ ಟಿ ನಿವೃತ್ತ ಃಇಔ ಹಿರಿಯ ಮುಖಂಡರು,ಸೋಮಣ್ಣ ಪತ್ತಾರ ಸುಕಲಪೇಟೆ ರಾಜ್ಯ ಕಾರ್ಯದರ್ಶಿಗಳು,ಅ.ಕ.ವಿ.ಮ.ಸಭೆ ಬೆಂಗಳೂರು.ವೀರೇಶ ದೇವರಗುಡಿ ಮುಖಂಡರು.ಮೌನೇಶ ತಿಡಿಗೋಳ ಅಧ್ಯಕ್ಷರು



ಹಾಗೂ ಪದಾಧಿಕಾರಿಗಳು ತಾ.ವಿ.ಸಿಂಧನೂರು. ಮಂಜುನಾಥ ಕೊಟ್ನೆಕಲ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಸಿಂಧನೂರು. ರವೀಂದ್ರ ಗದ್ರಟಗಿ ಅಧ್ಯಕ್ಷರು ಹಾಗೂ ಪದಾಧಿಕಾ–ರಿಗಳು ತಾಲೂಕ ಕರ್ಪೆಂಟರ್ ಕ್ಷೇಮಾಭಿವೃದ್ಧಿ ಸಂಘ ಸಿಂಧನೂರು. ಮಂಕು ಸತ್ಯನಾರಾಯಣ ಅಧ್ಯಕ್ಷರು ವೀರಬ್ರಹ್ಮೇಂದ್ರಸ್ವಾಮಿ ದೇವಸ್ಥಾನ ಸೇವಾ ಸಮಿತಿ,ಶಂಕ್ರಪ್ಪ ಸಾಹುಕಾರ ನಿಡಿಗೋಳ ಗೌರವ ಅಧ್ಯಕ್ಷರು, ಸಿದ್ರಾಮಪ್ಪ ಇರಿ ಹೊಸಳ್ಳಿ, ವೀರಭದ್ರಪ್ಪ ಹಂಚಿನಾಳ ಮಾಜಿ ಅಧ್ಯಕ್ಷರು,ಷಣ್ಮುಖಪ್ಪ ಪತ್ತಾರ ಉಪಾಧ್ಯಕ್ಷರು,– ಅಂಬಣ್ಣ ಪತ್ತಾರ ಗೋರೇಬಾಳ ಉಪಾಧ್ಯಕ್ಷರು, ತಿರುಮಲ ಆಚಾರ್ಯ ಗೆಜ್ಜೆಳ್ಳಿ ಉಪಾಧ್ಯಕ್ಷರು,ಸದಾಶಿವ ಬಡಿಗೇರ ಉಪಾಧ್ಯಕ್ಷರು,ಧರ್ಮಣ್ಣ ಪತ್ತಾರ ಗುಂಜಳ್ಳಿ ಪ್ರಧಾನ ಕಾರ್ಯದರ್ಶಿಗಳು, ಬಸವರಾಜ ಕಮತಗಿ ಕಾರ್ಯದರ್ಶಿಗಳು, ಮೌನೇಶ ಪ್ರಿನ್ಸ್ ಕಾರ್ಯದರ್ಶಿಗಳು, ಚನ್ನಪ್ಪ ಕೆ.ಹೊಸಹಳ್ಳಿ ಸಂಘಟನಾ ಕಾರ್ಯದರ್ಶಿಗಳು,ಮುತ್ತಣ್ಣ ಪತ್ತಾರ ಸಂಘಟನಾ ಕಾರ್ಯದರ್ಶಿಗಳು, ವಿಜಯ್ ಚಂದ್ರಆಚಾರಗೌರವಾಧ್ಯಕ್ಷರು,ವಿನೋದ ಕುಮಾರ ಕಾರ್ಯದರ್ಶಿಗಳು ಮೌನೇಶ ಪೈಂಟರ್, ಶ್ರೀ ಶಿವಾಚಾರ್ಯ ಅರ್ಚಕರು ವೇದಮೂರ್ತಿ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ದೇವಸ್ಥಾನ.ಡಾ.ವೀರೇಶ ಬಡಿಗೇರ,ಶಶಿಕಾಂತ ಮುದಗಲ್, ಶಿರಸಪ್ಪ ಕಂಬಾರ ಜಾಲಿಹಾಳ, ಪಂಪಣ್ಣ ಕಂಬಾರ ಜಾಲಿಹಾಳ, ಕಾಶೀಪತಿ ಜವಳಗೇರಾ,ಗುರುಮೂರ್ತಿ ಕಾಂಚಗಾರ ತುರವಿಹಾಳ,ಮರಿಸ್ವಾಮಿ ಕಾಂಚಗಾರ ತುರವಿಹಾಳ ಅಧ್ಯಕ್ಷರು, ಮಾನಪ್ಪ ವಾಸ್ತು ಅಲಬಾನೂರು, ದೇವರಾಜ ಉಪ್ಪಳ,ಬಸವರಾಜ ಮುಕ್ಕುಂದಾ,ಶರಣಪ್ಪ ಸೋಮಲಾಪುರ, ಗಂಗಾಧರ ಪೆಂಟರ್, ವೀರೇಂದ್ರ ಸಾಲಗುಂದ, ಚಿದಾನಂದ ಬಡಿಗೇರ ಗೋರೇಬಾಳ,ಗಣೇಶ ಪತ್ತಾರ ಸುಕಲಪೇಟೆ,ಶಂಕರ್ ಆಚಾರಿ ಸಿಂಧನೂರು, ನರಸಿಂಹ ಎಲೆಕೂಡ್ಲಿಗಿ, ಶ್ರವಣ ಕುಮಾರ,ಪ್ರಕಾಶ ಮುಳ್ಳೂರು, ಈರಣ್ಣ ಕೋಟೆ,ಸಣ್ಣ ವೀರೇಶ ಪತ್ತಾರ ಸುಕಲಪೇಟೆ,ಶಂಕರ್ ಪತ್ತಾರ ಗುಂಜಳ್ಳಿ, ರಾಜು ಪತ್ತಾರ ಬಳಗಾನೂರು, ನಾಗರಾಜ ಗೋರೇಬಾಳ, ಮರಿಸ್ವಾಮಿ ಬಡಿಗೇರ,ಪಂಪಣ್ಣ ಪತ್ತಾರ ಕಲಮಂಗಿ, ಮೌನೇಶ PWD,ಶರಣಬಸವ ಗುಂಜಳ್ಳಿ, ಪ್ರಸನ್ನ ಪತ್ತಾರ ಸುಕಲಪೇಟೆ,ಮನು ಪೆಂಟರ್ ಸಾಲಗುಂದ,ರವಿಕುಮಾರ ಬೋರಮಳ,ಅಶೋಕ ಬಾದರ್ಲಿ,ಕಿರಣ್ ಪತ್ತಾರ ಎಲೆಕೂಡ್ಲಿಗಿ,ವೀರಭದ್ರ ಪತ್ತಾರ ಅಲಬನೂರು,ಮೌನೇಶ ಉಪ್ಪಲದೊಡ್ಡಿ, ಶಾಶ್ವತ ಕುರುಕುಂದ,ಮಂಜುನಾಥ ಉಪ್ಪಲದೊಡ್ಡಿ,ವೀರೇಶ ದಡೆಸೂಗೂರು, ನರಸಪ್ಪ ಪೂಜಾರಿ,ಚಿನ್ನಪ್ಪ ಯಚ್ಚರಪ್ಪ ಬಿಜಕಲ್ಲ,ಮೌನೇಶ ಭಾಗ್ಯಪ್ಪ ಪತ್ತಾರ, ಅಂಬಣ್ಣ ತುರವಿಹಾಳ,ವೀರೇಶ ತುರವಿಹಾಳ,ಮಂಜುನಾಥ ನಿಡಿಗೋಳ, ದೇವಣ್ಣ ಹೆಡಗಿನಾಳ,ಸಿಂಧನೂರು ಹಾಗೂ ಸುತ್ತಮುತ್ತಲಿನ ಗ್ರಾಮ ಹೋಬಳಿಗಳ ಮುಖಂಡರು ಹಾಗೂ ವಿವಿಧ ಸಮಾಜಗಳ ಮುಖಂಡರು ಭಾಗವಹಿಸಿ ಯಶಸ್ವೀಗೊಳಿಸಿದರು.

## ಸರಕಾರಿ ಶಾಲೆಗೆ ದೇಣಿಗೆ ನೀಡಿದ ಹುಲಗಪ್ಪ ಇಲಕಲ್

**ನೈಜ್ಯ ದೆಸೆ ನ್ಯೂಸ್**

**ಗುಳಬಾಳ: ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗ್ರಾಮದ ಐತಿಹಾಸಿಕ ಹಿನ್ನೆಲೆ ಇರುವ 4000=00 ಮೌಲ್ಯದ ಬ್ಯಾನರ್ (ಕಬ್ಬಿಣದ ಪ್ರೇಮ್ ನೊಂದಿಗೆ 5/11 ಫೀಟ್ ಸ್ಕ್ರೀನ್) ದೇಣಿಗೆ ನೀಡಿದ ಶ್ರೀ ಹುಲಗಪ್ಪ.ಹ.ಇಲಕಲ್ ಇವ–ರಿಗೆ ಶಾಲೆಯ ವತಿಯಿಂದ ಅಭಿನಂದಿಸಿ ಸತ್ಕರಿಸಲಾಯಿತು.**




ಈ ಸಂದರ್ಭದಲ್ಲಿ ಶಾಲೆಯ ಪ್ರಧಾನ ಗುರುಗಳಾದ ಭೀಮನಗೌಡ ಬಿರಾದಾರ ಮಾತನಾಡಿ ತಮ್ಮ ಮಕ್ಕಳು ಶಿಕ್ಷಣ ಪಡೆಯುವ ಸರಕಾರಿ ಶಾಲೆಗೆ ದೇಣಿಗೆ ನೀಡಿದ ಮಹನೀಯರ ಕುಟುಂಬಕ್ಕೆ ದೇವರು ಒಳ್ಳೆಯ ಆರೋಗ್ಯ ಮತ್ತು ಶಿಕ್ಷಣ ಕಲ್ಪಿಸಲಿ ಎಂದು ಹೇಳಿದರು,ಈ ಸಂದರ್ಭ ರಾಜ್ಯ ಗ್ರೇಡ್ 02 ದೈಹಿಕ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ಬಸನಗೌಡ ರಾಜನಕೋಳೂರ,ಶಿಕ್ಷಕರಾದ ಪ್ರಭುಗೌಡ ಬಿರಾದಾರ,ಕಡ್ಲಬಾಳಪ್ಪ,ಹುಲಗನಗೌಡ ಹೊಸಮನಿ,ಶಿಕ್ಷಕಿಯರಾದ ಯಂಕಮ್ಮ ಬಮ್ಮನಳ್ಳಿ,ಭಾಗ್ಯಶ್ರೀ ಕಕ್ಕೇರಿ,ಸರೋಜಾ ಅಂಬಿಗೇರ,ಹುಲಗಪ್ಪ ಇಲಕಲ್ ಇವರ ಮಕ್ಕಳಾದ ದಿವ್ಯಾ,ಪ್ರವೀಣ ಇದ್ದರು.

## ಪೂಜ್ಯ ಡಾ. ಪುಟ್ಟರಾಜ ಕವಿ ಗವಾಯಿಗಳವರ 15ನೇ ಪುಣ್ಯಸ್ಮರಣೆಯ ಅಂಗವಾಗಿ 2 ದಿನಗಳ ಸಂಗೀತ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ರಾಯಚೂರಿನ ಲಿಂ. ಡಾ.ಪಂಡಿತ್ ಪುಟ್ಟರಾಜ ಸಾಂಸ್ಕೃತಿ–ಕ ಟ್ರಸ್ಟ್ ಸೋಮವಾರ ಪೇಟೆ ಹಿರೇಮಠದಲ್ಲಿ ಹಮ್ಮಿಕೊಂಡಿರುವ ಪರಮ ಪೂಜ್ಯ ಡಾ. ಪುಟ್ಟರಾಜ ಕವಿ ಗವಾಯಿಗಳವರ 15ನೇ ಪುಣ್ಯಸ್ಮರಣೆಯ ಅಂಗವಾಗಿ 2 ದಿನಗಳ ಸಂಗೀತ ಸಮ್ಮೇಳನವನ್ನು,**



ಶ್ರೀಶ್ರೀಶ್ರೀ ಅಭಿನವ ರಾಚೋಟಿವೀರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಶ್ರೀ ಶ್ರೀ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ, ರಾಜ್ಯ ಯುವ ಮುಖಂಡರಾದ ರವಿ ಬೋಸ್ ರಾಜು ಹಾಗೂ ಅತಿಥಿಗಳು ಉದ್ಘಾಟಿಸಿದರು ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರಾದ ಶ್ರೀ ನರಸಿಂಹಲು ಮಾಡಗೇರಿ, ಶ್ರೀ ಸಜೀದ್ ಸಮೀರ್, ಶ್ರೀ ರಮೇಶ್ ಯಾದವ್ ಇನ್ನಿತರರು ಉಪಸ್ಥಿತರಿದ್ದರು.

## ವಿಜ್ಞಾನ ವಸ್ತು ಪ್ರದರ್ಶನ: ವಿದ್ಯಾರ್ಥಿಗಳಿಂದ ವಿಜ್ಞಾನ ಲೋಕ ಅನಾವರಣ



**ನೈಜ್ಯ ದೆಸೆ ನ್ಯೂಸ್**

**ಕೊಪ್ಪಳ: ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ, ಸೃಜನಾತ್ಮಕತೆ, ವೈಜ್ಞಾನಿಕ ಮನೋಭಾವ, ಕೌಶಲ ಹೊರಹೊಮ್ಮುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ಮಕ್ಕಳು ಮಾಡಿರುವ ನೂತನ ಮಾದರಿಗಳು ವೈಜ್ಞಾನಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಸಂದೇಹವಿಲ್ಲ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಗೌಡ ಪಾಟೀಲ ಹೇಳಿದರು.**

ಇಲ್ಲಿನ ವಿದ್ಯಾಶ್ರೀ ಶಾಲೆಯಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು. 'ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತಿನಂತೆ ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿನ ನೈಜ–ತೆ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಮಕ್ಕಳ ಸುಪ್ತ ಪ್ರತಿಭೆ ಅರಳುತ್ತದೆ. ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ' ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ವಿಷಯಗಳ ಜ್ಞಾನ ಬಹಳ ಅವಶ್ಯವಿದೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ನಿರ್ಲಕ್ಷ್ಯ ಮಾಡದೆ ಪ್ರತಿಯೊಂದು ವಿಷಯಗಳ ಅಧ್ಯಯನ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಸಾಧಿಸಬೇಕು ಅಂದರೆ ಜ್ಞಾನ ಸಂಪಾದಿಸಿಕೊಳ್ಳಬೇಕು'ಎಂದು ಸಲಹೆ ನೀಡಿದರು. ಸಂಸ್ಥೆಯ ಅಧ್ಯಕ್ಷ ಜಸ್ವಂತ್‌ರಾವ್ ಜೈನ್ ಮಾತನಾಡಿ, 'ವಿಜ್ಞಾನ ವಿಷಯಗಳ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದ–ರಿಂದ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಮುಂದೆ ಬರಬೇಕು' ಎಂದು ಹೇಳಿದರು.

ವಸ್ತು ಪ್ರದರ್ಶನದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪರಮಾಣುಗಳ ರಚನೆ, ವಾಯು ಮಾಲಿನ್ಯ ನಿಯಂತ್ರಣ, ರಕ್ತ ಗುಂಪುಗಳ ಮಾಹಿತಿ, ನೀರಿನ ಮಟ್ಟ ಸೂಚಕ, ನೀರಿನ ಶುದ್ಧಿಕರಣ, ಬೆಳೆ ಸಂರಕ್ಷಣಾ ಮಾದರಿ, ಸೋಲಾರ್ ಟ್ರ್ಯಾಕಿಂಗ್ ಸಿಸ್ಟಮ್, ಮಿಶ್ರ ಬೇಸಾಯ ಸೇರಿದಂತೆ ವಿವಿಧ ಬಗೆಯ ಮಾದರಿ ಪ್ರದರ್ಶನ ಆಕರ್ಷಕವಾಗಿತ್ತು. ಪ್ರಶಸ್ತಿ ವಿವರ: ಪ್ರದರ್ಶನದಲ್ಲಿ ವೈಯಕ್ತಿಕ ಹಾಗೂ ಗುಂಪು ವಿಭಾಗವಾಗಿ ಮಾಡಲಾಗಿ–ತ್ತು. ವೈಯಕ್ತಿಕ ವಿಭಾಗದಲ್ಲಿ 8 ತಂಡ, ಗುಂಪು ವಿಭಾಗದಲ್ಲಿ 8 ತಂಡ ಭಾಗವಹಿಸಿದ್ದವು. ಎಲ್.ಡಿ ಜೋಶಿ, ನಾಗರಾಜ್ ಜುಮ್ಮಣ್ಣವರ್, ಸೋಮಶೇಖರ್ ಹರ್ತಿ, ಮಹೇಶ್ ಸಬರದ, ಹೇಮಣ್ಣ ಕುಕನೂರ, ಜಾಕಿರ್ ಹುಸೇನ್ ಕೊಪ್ಪಳ, ಈರಣ್ಣ ಹೆಬ್ಬಾಳ್, ಸುರೇಶ್ ಬಳೂಟಗಿ ಇದ್ದರು. ಸೋಮಶೇಖರಗೌಡ ಪಾಟೀಲ ಡಿಡಿಪಿಐ ಕೊಪ್ಪಳವಿದ್ಯಾರ್ಥಿಗಳು ಮಾಡಿರುವ ಚಿಕ್ಕ ಚಿಕ್ಕ ಪ್ರಯೋಗಗಳು ಮುಂದೆ ಅದ್ಭುತವಾದಂತಹ ಸಂಶೋಧನೆಗೆ ಕಾರಣವಾಗಬಹುದು. ಪ್ರತಿಯೊಬ್ಬರೂ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು.

## ದಂಪತಿಗಳನ್ನು ಒಗ್ಗೂಡಿಸಿದ ಲೋಕ ಅದಾಲತ್

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಡಿ 14 ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಯಚೂರು ತಾಲೂಕು ಕಾನೂನು ಸೇವಾ ಸಮಿತಿ, ಲಿಂಗಸಗೂರು ಇವರುಗಳ ಸಂಂ–ಯುಕ್ತಾಶ್ರಯದಲ್ಲಿ ಇಂದು ರಾಷ್ಟೀಯ ಲೋಕ ಅದಾಲತ್ತನ್ನು ಆಯೋಜಿಸಲಾಗಿದ್ದು ಇದರಲ್ಲಿ ಕೌಟುಂಬಿಕ ಕಲಹದಿಂದ ದೂರಸರಿಯಲು ಇಚ್ಚಿಸಿದ ದಂಪತಿಗಳ ಪರವಾಗಿ ಕೆ.ತಸ್ಲೀಮ ವಕೀಲರು ಮತ್ತು ಬಿ.ಬಸವರಾಜ ವಕೀಲರು ನ್ಯಾಯಾಲಕ್ಕೆ ಬಂದಾಗ ಹಿರಿಯ ಶ್ರೇಣಿ ನ್ಯಾಯಧೀಶರಾದ ಶ್ರೀಮತಿ ಉಂಡಿ ಮಂಜುಳಾ ಶಿವಪ್ಪ ಇವರು ಪ್ರಕರಣವನ್ನು ಕೈಗೆತ್ತಿಕೊಂಡು ದಂಪತಿಗಳಿಗೆ ಜೀವನದ ಬಗ್ಗೆ ತಿಳುವಳಿಕೆ ಹೇಳಿ ದಂಪತಿಗಳನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾದರು.**




ಅದರಂತೆ ಲೋಕ ಅದಾಲತ್ತಿನಲ್ಲಿ ರಾಜಿಯಾಗುವ ಮೂಲಕ ಪರಸ್ಪರ ಹೂವಿನ ಹಾರ ಬದಲಿಸಿಕೊಂಡು ಬೇರೆಯಾಗಬೇಕಿದ್ದ ದಂಪತಿಗಳು ಒಗ್ಗೂಡಿಸಿದರು. 5744ಬಾಕಿ ಪ್ರಕರಣಗಳ ಪೈಕಿ 2266 ಪ್ರಕರಣಗಳು ಲೋಕ ಅದಾಲತ್ತಿನಲ್ಲಿ ರಾ–ಜಿಯಾಗುವ ಮೂಲಕ ಇತ್ಯಾರ್ಥವಾಗಿರುತ್ತವೆ. ಇದರ ಒಟ್ಟು ಮೊತ್ತ ರೂ. 2,37,24,547 (ಎರಡು ಕೋಟಿ ಮೂವತ್ತೇಳು ಲಕ್ಷದ ಇಪ್ಪತ್ತು ನಾಲ್ಕು ಸಾವಿರದ ಐದುನೂರ ನಲವತ್ತೇಳು ರೂಪಾಯಿ) ಆಗಿದ್ದು , ವಾಜ್ಯಪೂರ್ವ ಪ್ರಕರಣ 6949 ಪೈಕಿ 6029 ವಾಜ್ಯಪೂರ್ವ ಪ್ರಕರಣಗಳು ಲೋಕ ಅದಾಲತ್ತಿನಲ್ಲಿ ರಾ–ಜಿಯಾಗುವ ಮೂಲಕ ಇತ್ಯಾರ್ಥವಾಗಿರುತ್ತವೆ. ಇದರ ಒಟ್ಟು ಮೊತ್ತ ರೂ. 1,34,59,724 (ಒಂದು ಕೋಟಿ ಮೂವತ್ತುನಾಲ್ಕು ಲಕ್ಷದ ಐವತ್ತೊಂಬತ್ತು ಸಾವಿರದ ಏಳುನೂರ ಇಪ್ಪತ್ತುನಾಲ್ಕು ರೂಪಾಯಿ ) ಆಗಿರುತ್ತದೆ. ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ನ್ಯಾಯಧೀಶರಾದ ಅಂಬಣ್ಣ.ಕೆ ಹಾಗೂ ರಾಘವೇಂದ್ರ ಮುತಾಲಿಕ, ಕಲ್ಮಟ ವಕೀಲರು, ವಿಶ್ವನಾಥ, ನಾಗರಾಜ ಏಲಿಗಾರ, ಹಾಜಿಬಾಬು, ಅನೀಲ, ಶಶಿ ಹೊಸಮನಿ, ರವಿ, ಚಂದರಮತಿ, ವಿಜಯಲಕ್ಮೀ, ಪ್ರಮೋಧ, ಶಿವಲಿಂಗಪ್ಪ, ಕ–ರಿಯಪ್ಪ ಇತರೆ ವಕೀಲರು ಹಾಜರಿದ್ದರು.

# ಮಹಿಳೆಯರು ಅನ್ಯಾಯದ ವಿರುದ್ದ ಕಿತ್ತೂರು ಚೆನ್ನಮ್ಮ, ದುರ್ಗಾದೇವಿ ಆಗಬೇಕು:ಬಸವರಾಜ ಬೊಮ್ಮಾಯಿ

**ನೈಜ್ಯ ದೆಸೆ ನ್ಯೂಸ್**

**ಹುಬ್ಬಳ್ಳಿ: ಕರ್ನಾಟಕದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ. ಪ್ರತಿ ದಿನ ಅತ್ಯಾಚಾರ, ದೌರ್ಜನ್ಯ, ಆತ್ಮಹತ್ಯೆ, ಕೊಲೆ ನಡೆಯುತ್ತಿವೆ. ಹುಬ್ಬಳ್ಳಿಯ ನೇಹಾ ಕೊಲೆ ಪ್ರಕರಣದಿಂದ ಹಿಡಿದು ಈ ಸರ್ಕಾರದಲ್ಲಿ ಇಂದಿಗೂ ನಿಂತಿಲ್ಲ. ಇದರ ವಿರುದ್ಧ ಸಾಮಾಜಿಕ ಜಾಗೃತಿ ಮಾಡಬೇಕು. ಮಹಿಳೆಯ–ರಿಗೆ ತಿಂಗಳಿಗೆ ಎರಡು ಸಾವಿರ ಕೊಟ್ಟು ಬಾಯಿ ಮುಚ್ಚಿಸಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.**

ಭಾರತೀಯ ಜನತಾ ಪಾರ್ಟಿ ಕರ್ನಾಟಕ ಮಹಿಳಾ ಮೋರ್ಚಾದ ವತಿಯಿಂದ ಇಂದು ಹುಬ್ಬಳ್ಳಿಯ ಅರವಿಂದ ನಗರದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಉತ್ತರ ಕರ್ನಾಟಕ ವಿಭಾಗದ ಮಹಿಳಾ ಮೋರ್ಚಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕರ್ನಾಟಕದ ಭವಿಷ್ಯದ ಮಹಿಳಾ ಶಕ್ತಿ ಇಲ್ಲಿ ಸೇರಿದೆ ಅಂತ ಅನಿಸುತ್ತಿದೆ. ಭವಿಷ್ಯದ ದೃಷ್ಟಿ ಇಟ್ಟುಕೊಂಡು ತಮ್ಮನ್ನು ಇಲ್ಲಿ ಸೇರಿಸಿದ್ದಾರೆ. ಅನ್ಯಾಯದ ವಿರುದ್ಧ ಧ್ವನಿ ಎತ್ತಲು ತಮ್ಮನ್ನು ಸಂಘಟನೆ ಮಾಡಲು ಸೇ–ರಿಸಿದ್ದಾರೆ. ಅದರ ಮೂಲಕ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಭವ್ಯ ಭವಿಷ್ಯ ಬರೆಯಲು ಸೇರಿಸಿದ್ದಾರೆ. ಈಗ ನಿಮ್ಮ ನಾಯಕತ್ವದ ಗುಣಗಳನ್ನು ತೋರಿಸಿದರೆ 2030 ಕ್ಕೆ ಬರುವಂತಹ ಮೀಸಲಾತಿಯಲ್ಲಿ ತಾಯಂದಿರಿಗೆ ನಾಯಕತ್ವ ತೋರಿಸಲು ಅವಕಾಶ' ಸಿಗುತ್ತದೆ. ಭಾರತದ ಸುಸಂಸ್ಕೃತಿ ಸಂಸ್ಕಾರ ಯಾವುದಾದರೂ ರಾಜಕೀಯ ಪಕ್ಷದಲ್ಲಿ ಇದ್ದರೆ ಅದು ಬಿಜೆಪಿಯಲ್ಲಿದೆ. ನೀವು ಯಶಸ್ವಿ ಗೃಹಿಣಿಯರಾಗಿ, ತಾಯಂದಿರಾಗಿ ನಿಮ್ಮ ನೈತಿಕತೆಯನ್ನು ಉಳಿಸಿಕೊಂಡು ಬಿಜೆಪಿಯಲ್ಲಿ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಲು ಬಂದಿದ್ದೀರಿ.



ಶೇ 50 ರಷ್ಟಿರುವ ಮಹಿಳಾ ಶಕ್ತಿ ಭಾರತವನ್ನು ಇಡೀ ವಿಶ್ವದಲಿಯೇ ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವ ಶಕ್ತಿ ಹೊಂದಿದೆ. ಶೇ 50 ರಷ್ಟು ಅವಕಾಶ ಕೊಟ್ಟರೂ ಭಾರತ ಅಭಿವೃದ್ಧಿಯಾಗುತ್ತದೆ. ಹತ್ತು ವರ್ಷದಲ್ಲಿ ಆಗಬೇಕಾದ ಕೆಲಸ ಐದು ವರ್ಷದಲ್ಲಿ ಆಗಬೇಕೆಂದರೆ ಮಹಿಳೆಯರಿಗೆ ಅವಕಾಶ ಕೊಡಬೇಕು. ಭಾರತದ ಮಹಿಳೆ ಅಬಲೆಯಲ್ಲ ಸಬಲೆ, ಅವಕಾಶ ಸಿಕ್ಕರೆ ಏನೆಲ್ಲ ಮಾಡಬಹುದು ಎನ್ನುವುದನ್ನು ಇತಿಹಾಸದಲ್ಲಿ ಕಿತ್ತೂರು ಚೆನ್ನಮ್ಮ, ಝೂನ್ಸಿರಾಣಿ ಲಕ್ಷ್ಮೀ ಬಾಯಿ ತೋರಿಸಿಕೊಟ್ಟಿದ್ದಾರೆ. ಮೊಗಲರ ಕಾಲದಲ್ಲಿ ನಮ್ಮ ಮಹಿಳೆಯರ ಮೇಲೆ ಅತ್ಯಾಚಾರ, ಅನಾಚಾರ ನಡೆದರೂ ಅದನ್ನು ಸಹಿಸಿಕೊಂಡು ಈ ದೇಶದ ಸಿಂಧೂರ ಉಳಿಸಿಕೊಂಡು ಬಂದಿರುವುದು ನಮ್ಮ ತಾಯಂದಿರು. ಮಹಿಳೆಯರು ಎಲ್ಲ ರಂಗದಲ್ಲಿಯೂ ಇದ್ದಾರೆ. ನಾಸಾದಲ್ಲಿ ಹೆಚ್ಚು ಭಾರತಿಯರಿದ್ದರೆ ಇಸ್ರೋದಲ್ಲಿ ಐವತ್ತರಷ್ಟು ಮಹಿಳೆಯರಿದ್ದಾರೆ. ನಿಮ್ಮಲ್ಲಿ ಪ್ರಾಮಾಣಿಕತೆ, ನಿಷ್ಠೆ ಇರುತ್ತದೆ ಎಂದ ಹೇಳಿದರು.

ಉಳಿತಾಯ ಆರ್ಥಿಕತೆ ಇವತ್ತು ನಮ್ಮ ಭಾರತ ಆರ್ಥಿಕವಾಗಿ ಸಬಲವಾಗಲು ಕಾರಣ ಏನೆಂದರೆ ವಿದೇಶದಲ್ಲಿ ಅತಿ ಹೆಚ್ಚು ಖರ್ಚು ಮಾಡುವುದೇ ಬೆಳವಣಿಗೆ ಅಂದುಕೊಂಡಿದ್ದಾರೆ. ಇದ್ದ ಆದಾಯದಲ್ಲಿ ಉಳಿತಾಯ ಮಾಡುವುದು ನಮ್ಮ ಆರ್ಥಿಕತೆ, ನಮ್ಮದು ಉಳಿತಾಯ ಆರ್ಥಿಕತೆ, ನಮ್ಮ ಭಾರತದಲ್ಲಿ ಉಳಿತಾಯ ಮಾಡುವ ಸಂಸ್ಕೃತಿ ಹೆಚ್ಚಿದೆ. ಗಂಡ ಹತ್ತು ಸಾವಿರ ರೂ. ಕೊಟ್ಟಿದ್ದರೆ ಹೆಂಡತಿ ಕನಿಷ್ಠ ಎರಡು ಸಾವಿರ ರೂ. ಉಳಿಸಿರುತ್ತಾರೆ. ಅಮೇ–ರಿಕಾದ ಆರ್ಥಿಕತೆಗೆ ಪ್ರತಿಸ್ಪರ್ಧಿ ನಮ್ಮ ಸಾಸಿವೆ ಜೀ–ರಿಗೆ ಡಬ್ಬಿ. ಅಮೇರಿಮಾದ ಆರ್ಥಿಕತೆಯೊಂದಿಗೆ ಸಾಸಿವೆ ಡಬ್ಬಿ ಸ್ಪರ್ಧೆಗೆ ಇಟ್ಟರೆ ಸಾಸಿವೆ ಜೀರಿಗೆ ಡಬ್ಬಿಯೇ ಗೆಲ್ಲುತ್ತದೆ. ಕಷ್ಟಕಾಲದಲ್ಲಿ ಅದು ನಮ್ಮನ್ನು ಕಾಪಾಡುತ್ತದೆ. ನಮ್ಮ ತಾಯಂದಿರು ಆದನ್ನು ಒಂದು ಸಂಸ್ಕೃತಿಯಾಗಿ ಉಳಿಸಿಕೊಂಡು ಬಂದಿದ್ದಾರೆ. ಎಲ್ಲ ಕಾರ್ಯಕ್ರಮಗಳಲ್ಲಿಯೂ ಅತಿ ಹೆಚ್ಚು ಮಹಿಳೆಯರು ಪಾಲ್ಗೊಳ್ಳುತ್ತಾರೆ. ಗದಗನಲ್ಲಿ ಒಂದು ಹೋಮ ನಡೆಯಿತು.

ಅಲ್ಲಿ ಸುಮಾರು ಹದಿನೈದು ಸಾವಿರ ಮಹಿಳೆಯರು ಬಂದಿದ್ದರು. ಅಷ್ಟು ದೊಡ್ಡ ಪ್ರಮಾಣದಲ್ಲಿ ಬಂದಿದ್ದರು. ಆಗ ಮಹಿಳಾ ಶಕ್ತಿ ಎಷ್ಟಿದೆ ಅಂತ ಅರಿವಿಗೆ ಬಂತು. ಅವರು ನಮ್ಮ ಹಿಂದೂ ಧರ್ಮದ ಮೇಲಿನ ವಿಶ್ವಾಸದಿಂದ ಬಂದಿದ್ದರು. ದೇವಾಲಯಗಳಲ್ಲಿ ನಮ್ಮ ತಾಯಂದಿರು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚಿರುತ್ತಾರೆ. ಮುಂದಿನ ಪೀಳಿಗೆಯನ್ನು ಸುಸಂಸ್ಕೃತ ಮಾಡುವುದರಲ್ಲಿ ತಾಯಂದಿರ ಪಾತ್ರ ಬಹಳ ಮುಖ್ಯವಾಗಿದೆ. ತಾಯಿತನ ಅತ್ಯಂತ ಶ್ರೇಷ್ಟವಾಗಿದೆ. ನಾವು ಭೂಮಿಗೆ ಬರುವ ಮುಂಚೆ ಇರುವುದು ತಾಯಿಯ ಸಂಬಂಧ'. ಉಳಿದ ಸಂಬಂಧಗಳು ನಾವು ಹುಟ್ಟಿದ ನಂತರ ಬರುತ್ತವೆ. ಆ ತಾಯಿತನ ಎಲ್ಲವನ್ನು ಕಲಿಸಿಕೊಡುತ್ತದೆ ಎಂದು ಹೇಳಿದರು.

ಆಂದೋಲನ ನಡೆಯಲಿ ಇಷ್ಟೆಲ್ಲ ಆದರೂ ನಮ್ಮತನ ರಕ್ಷಣೆ ಮಾಡುವ ಕಾಲ ಬಂದಿದೆ. ಹಿಂದೂ ಸಮಾಜ ತನ್ನಷ್ಟಕ್ಕೆ ತಾನೇ ಸ್ವಾಭಿಮಾನದಿಂದ ದುಡಿದು ಮುಂದೆ ಬರುತ್ತಿದ್ದರೆ ಕೆಲವರಿಗೆ ಸಹಿಸಿಕೊಳ್ಳಲು ಆಗುವುದಿಲ್ಲ. ಕರ್ನಾಟಕದಲ್ಲಿ ಮಹಿಳೆರಯಿಗೆ ಸುರಕ್ಷತೆ ಇಲ್ಲ. ಪ್ರತಿ ದಿನ ಅತ್ಯಾಚಾರ, ದೌರ್ಜನ್ಯ, ಆತ್ಮಹತ್ಯೆ, ಕೊಲೆ ನಿರಂತರ ನಡೆಯುತ್ತಿವೆ.

ಹುಬ್ಬಳ್ಳಿಯ ನೇಹಾ ಕೊಲೆ ಪ್ರಕರಣದಿಂದ ಹಿಡಿದು ಈ ಸರ್ಕಾರದಲ್ಲಿ ಇಂದಿಗೂ ನಿಂತಿಲ್ಲ. ಇದರ ವಿರುದ್ಧ ಸಾಮಾಜಿಕ ಜಾಗೃತಿ ಮಾಡಬೇಕು. ಮಹಿಳೆಯ–ರಿಗೆ ತಿಂಗಳಿಗೆ ಎರಡು ಸಾವಿರ ಕೊಟ್ಟು ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಮಹಿಳೆಯರು ಸುರಕ್ಷತೆ ನೀಡದೆ ಮಕ್ಕಳು ಮನೆಗೆ ಬರದಂತಹ ಪರಿಸ್ಥಿತಿ ನಿರ್ಮಾಣ ಮಾಡಿ ಎಡರು ಸಾ ವಿರ ಕೊಟ್ಟರೆ ಅವರು ಸುಮ್ಮನಿರುತ್ತಾರೆಯೇ. ಗೃಹ ಸಚಿವರು ಅಂಕಿ ಸಂಖ್ಯೆಗಳ ಮೂಲಕ ಎಲ್ಲವನ್ನು ಮುಚ್ಚಿ ಹಾಕಲು ಸಾಧ್ಯವಿಲ್ಲ. ಗೃಹ ಸಚಿವರ ಕೈಯಲ್ಲಿ ಗೃಹ ಇಲಾಖೆ ಇಲ್ಲ. ಪ್ರತಿ ದಿನ ಸಾಕಷ್ಟು ಘಟನೆಗಳು ನಡೆಯುತ್ತವೆ. ಆದನ್ನು ನಿಲ್ಲಿಸಲು ಆಗುತ್ತಿಲ್ಲ. ಜನರು ಇದಿದ್ದು ಇದ್ದಂಗ ಮಾತನಾಡಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನು ತಂದಿದ್ದಾರೆ. ಮಹಿಳೆಯರ ಸುರಕ್ಷತೆಗೆ ಏನಾದರೂ ಕಾನೂನು ತನ್ನಿ. ಕೇಂದ್ರ ಸರ್ಕಾರ ನಿರ್ಭಯ ಯೋಜನೆ ಅಡಿಯಲ್ಲಿ ಮಹಿಳೆಯರ ರಕ್ಷಣೆಗೆ ಹಣ ನೀಡುತ್ತದೆ ಅದನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರದ ಸಂಜೀವಿನಿ ಯೋಜನೆ ಮಹಿಳಾ ಸಂಘಟನೆಗೆ ನೀಡುವುದು ಅದನ್ನು ನಿಲಿಸಿದ್ದಾರೆ. ನಾನು ಸಿಎಂ ಇದ್ದಾಗ ಮಹಿಳಾ ಸಂಘಗಳಿಗೆ ಪ್ರತಿ ವರ್ಷ ಒಂದು ಲಕ್ಷ ನೀಡುವ ಸಾಮರ್ಥ್ಯ ಯೋಜನೆ ಮಾಡಿದ್ದೆ ಅದನ್ನು ನಿಲ್ಲಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಮೊಅಲಜಾತ್ (Moalajat)

ಮೊಅಲಜಾತ್ ಅನ್ನು ಸಮಕಾಲೀನ ವೈದ್ಯಕೀಯದಲ್ಲಿನ ಜನರಲ್ ಮೆಡಿಸಿನ್ ಗೆ ಸಮಾನವೆಂದು ಪರಿಗಣಿಸಲಾಗುತ್ತದೆ. ಇದು ಯುನಾನಿ ವೈದ್ಯಕೀಯ ಪದ್ಧತಿಯ ಕೇಂದ್ರಬಿಂದುವಾದ ವಿಶೇಷ ವಿಭಾಗವಾಗಿದ್ದು, ರೋಗಿ ಆರೈಕೆಯನ್ನು ಸಮಗ್ರ (Holistic) ದೃಷ್ಟಿಕೋನದಿಂದ ನಿರ್ವಹಿಸುವುದರ ಮೂಲಕ ಈ ವೈದ್ಯಕೀಯ ಪದ್ಧತಿಯ ವೈಶಿಷ್ಟ್ಯತೆ ಸ್ಪಷ್ಟವಾಗಿ ಕಾಣಿಸುತ್ತದೆ. ಮೊಅಲಜಾತ್ ವಿಶೇಷತೆ ಯುನಾನಿ ವೈದ್ಯಕೀಯ ಪದ್ಧತಿಯ ತತ್ವಗಳು ಮತ್ತು ಸಿದ್ಧಾಂತಗಳನ್ನು ಆಧರಿಸಿ ಮಾನವ ದೇಹದ ಆರೋಗ್ಯ ಮತ್ತು ರೋಗಗಳ ಅರಿವು, ವಿಶ್ಲೇಷಣೆ ಹಾಗೂ ಚಿಕಿತ್ಸೆಯನ್ನು ಒಳಗೊಂಡಿದೆ. ಯುನಾನಿ ಚಿಕಿತ್ಸಾ ತತ್ವಗಳಾದ ಇಲಾಜ್ ಬಿಲ್ ದವಾ (ಔಷಧ ಚಿಕಿತ್ಸೆ), ಇಲಾಜ್ ಬಿತ್ ತದ್ಬೀರ್ (ಪದ್ಧತಿ/ಜೀವನಶೈಲಿ ಚಿಕಿತ್ಸೆ) ಮತ್ತು *ಇಲಾಜ್ ಬಿಲ್ ಘಿಜಾ (ಆಹಾರ ಚಿಕಿತ್ಸೆ)*ಗಳ ಮೂಲಕ ಎಲ್ಲಾ ವಿಧದ ರೋಗಗಳ ನಿರ್ವಹಣೆಯನ್ನು ಈ ವಿಭಾಗ ಕೈಗೊಳ್ಳುತ್ತದೆ. ಪೋಸ್ಟ್ ಗ್ರಾಜುಯೇಟ್ ಮಟ್ಟದಲ್ಲಿ ಈ ಕೆಳಗಿನ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ಮೊಅಲಜಾತ್ ವಿಭಾಗ ನಿರ್ಧರಿಸಿದೆ:1. ಬೋಧನÉ (Teaching) ಯುನಾನಿ ವೈದ್ಯಕೀಯ ಪದ್ಧತಿಯ ತತ್ವಗಳು ಮತ್ತು ಸಿದ್ಧಾಂತಗಳನ್ನು ಉಳಿಸಿಕೊಂಡು, ಅವುಗಳನ್ನು ಸಮಕಾಲೀನ ವಿಜ್ಞಾನಗಳೊಂದಿಗೆ ಅಥ‍ರ್ೈಸುವುದು, ವಿವೇಚನೆ ಮಾಡುವುದು ಮತ್ತು ವಿಶ್ಲೇಷಣೆ ಮಾಡುವುದಕ್ಕೆ ಒತ್ತು ನೀಡುವುದು. 2. ತರಬೇತಿ (Training) ತರಬೇತಿಯ ಮುಖ್ಯ ಒತ್ತಾಯವು ರೋಗಿ ಆರೈಕೆ ಮೇಲಿರುತ್ತದೆ. ಯುನಾನಿ ಸಾಹಿತ್ಯದಲ್ಲಿ ವಿವರಿಸಲಾದ ಎಲ್ಲಾ ಕೌಶಲ್ಯಮಯ ವಿಧಾನಗಳು ಮತ್ತು ಕ್ರಮಗಳ ಅನುಷ್ಠಾನಕ್ಕೆ ಜೊತೆಗೆ, ರೋಗನಿರ್ಣಯ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ಸಮಕಾಲೀನ ವಿಜ್ಞಾನಗಳ ವಿಧಾನಗಳು ಹಾಗೂ ಪ್ರಕ್ರಿಯೆಗಳ ಅಳವಡಿಕೆಗೆ ಮಹತ್ವ ನೀಡಲಾಗುತ್ತದೆ.3. ಸಂಶೋಧನೆ (Research) ಯುನಾನಿ ಸಾಹಿತ್ಯ ಮತ್ತು ಫಾರ್ಮಕೋಪಿಯಗಳಲ್ಲಿ ಉಲ್ಲೇಖಿಸಲಾದ ಚಿಕಿತ್ಸೆಗಳ ಪರಿಣಾಮಕಾರಿತ್ವಕ್ಕೆ ಸಾಕ್ಷ್ಯ ಒದಗಿಸುವುದು ಹಾಗೂ ಆ ಸಾಕ್ಷ್ಯಾಧಾರಿತ ಗಮನಾರ್ಹತೆಗಳನ್ನು ಸಮಕಾಲೀನ ಸಂಶೋಧನಾ ಉಪಕರಣಗಳ ಸಹಾಯದಿಂದ ಸಮಗ್ರವಾಗಿ ಮಾನ್ಯಗೊಳಿಸುವುದೇ ಸಂಶೋಧನೆಯ ಮುಖ್ಯ ಗುರಿಯಾಗಿದೆ. ಪೋಸ್ಟ್ ಗ್ರಾಜುಯೇಟ್ ಹಂತದಲ್ಲಿ ಮೊಅಲಜಾತ್ ವಿಭಾಗವು ವಿಶೇಷವಾಗಿ ಈ ಕೆಳಗಿನ ಕ್ಷೇತ್ರಗಳಲ್ಲಿ ಸಂಶೋಧನೆಗೆ ಆದ್ಯತೆ ನೀಡಿದೆ: ಅಮ್ರಾಝು ನಿಜಾಮೆ ಹಝುಮ್ (ಜೀರ್ಣಾಂಗ ವ್ಯವಸ್ಥೆಯ ರೋಗಗಳು) ಅಮ್ರಾಝು ನಿಜಾಮೆ ಅಸಾಬ್ (ನರವ್ಯವಸ್ಥೆಯ ರೋಗಗಳು) ಅಮ್ರಾಝು ಜಿಲ್ದ್ (ಚರ್ಮರೋಗಗಳು) ಅಮ್ರಾಝು ಮಫಾಸಿಲ್ (ಸಂಧಿ ರೋಗಗಳು) ಅಮ್ರಾಝು ಇಸ್ತಿಹಾಲಾ (ಚಯಾಪಚಯ/ಮೆಟಾಬಾಲಿಕ್ ರೋಗಗಳು) ಅಮ್ರಾಝು ನಫ್ಸಾನಿಯಾ (ಮಾನಸಿಕ ರೋಗಗಳು) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಸಂಸ್ಥೆಯು NIUM ಅನ್ನು ಪಿಎಚ್.ಡಿ. ಸಂಶೋಧನಾ ಕೇಂದ್ರವಾಗಿ ಮಾನ್ಯತೆ ನೀಡಿದ್ದು, ಮೊಅಲಜಾತ್ ವಿಭಾಗವು 2014–15 ಶೈಕ್ಷಣಿಕ ವರ್ಷದಿಂದ ಮೊಅಲಜಾತ್ ವಿಷಯದಲ್ಲಿ ಪಿಎಚ್.ಡಿ. ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಒಆ ಮೊಅಲಜಾತ್ ಕೋರ್ಸ್‌ವು ಯುನಾನಿ ವೈದ್ಯಶಾಸ್ತ್ರದ 3 ವರ್ಷಗಳ ಸ್ನಾತಕೋತ್ತರ (ಪೋಸ್ಟ್‌ಗ್ರಾಜುಯೇಟ್) ವಿಶೇಷಿಕರಣವಾಗಿದ್ದು, ಯುನಾನಿ ತತ್ವಗಳ ಆಧಾರದ ಮೇಲೆ ರೋಗಗಳ ನಿರ್ಣಯ ಮತ್ತು ಚಿಕಿತ್ಸೆ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಮೊಅಲಜಾತ್ ಎಂದರೆ ಚಿಕಿತ್ಸೆ/ವೈದ್ಯಕೀಯ. ಈ ಕೋರ್ಸ್‌ನಲ್ಲಿ ನೈಸರ್ಗಿಕ ಔಷಧೋಪಚಾರ, ಸಮಗ್ರ (ಹೋಲಿಸ್ಟಿಕ್) ಆರೈಕೆ ಹಾಗೂ ಕ್ಲಿನಿಕಲ್ ಕೌಶಲ್ಯಗಳಿಗೆ ಒತ್ತು ನೀಡಲಾಗುತ್ತದೆ. ಬೆಂಗಳೂರುದಲ್ಲಿನ NIUM ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಈ ಕೋರ್ಸ್ ಲಭ್ಯವಿದ್ದು, ಪ್ರವೇಶಕ್ಕೆ BUMSಪದವಿ ಮತ್ತು ಪ್ರವೇಶ ಪರೀಕ್ಷೆ (AIAPGET) ಅಗತ್ಯ. ಇದು ಉನ್ನತ ಮಟ್ಟದ ಯುನಾನಿ ವೈದ್ಯಕೀಯ ಅಭ್ಯಾಸಕ್ಕೆ ಅಗಾಧ ಜ್ಞಾನವನ್ನು ಒದಗಿಸುತ್ತದೆ. MD ಮೊಅಲಜಾತ್ ಡಾಕ್ಟರ್ ಆಫ್ ಮೆಡಿಸಿನ್ (MD) ಇನ್ ಮೊಅಲಜಾತ್ (ವೈದ್ಯಕೀಯ/ಚಿಕಿತ್ಸಾಶಾಸ್ತ್ರ) ಯುನಾನಿ ಪದ್ಧತಿಯ ಮೂಲ ವಿಶೇಷತೆ. ಕೆಳಗಿನ ಯುನಾನಿ ತತ್ವಗಳ ಮೂಲಕ ರೋಗ ನಿರ್ವಹಣೆಯನ್ನು ಕಲಿಸುತ್ತದೆ: ಇಲಾಜ್ ಬಿಲ್ ದವಾಟ ಔಷಧ ಚಿಕಿತ್ಸೆಯ ಮೂಲಕ ಚಿಕಿತ್ಸೆ ಇಲಾಜ್ ಬಿತ್ ತದ್ಬೀರ್ ರೆಜಿಮೆಂಟಲ್ ಥೆರಪಿ ಇಲಾಜ್ ಬಿಲ್ ಘಿಜಾ ಆಹಾರ ಚಿಕಿತ್ಸೆ ಅವಧಿ: 3 ವರ್ಷಗಳ ನಿಯಮಿತ ಸ್ನಾತಕೋತ್ತರ ಕೋರ್ಸ್ ಕೋರ್ಸ್‌ನ ಮುಖ್ಯ ಅಂಶಗಳು ಸಮಗ್ರ ದೃಷ್ಟಿಕೋನ: ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡನ್ನೂ ಗಮನಿಸಿ ಸಮತೋಲನ ಮತ್ತು ಕ್ಷೇಮವನ್ನು ಪುನಃಸ್ಥಾಪಿಸುವುದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಾಹಿತಿ ಕೊರತೆಯಿಂದ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರೆಯುತ್ತಿಲ್ಲ :ರಾಜಾ ವೆಂಕಟಪ್ಪ ನಾಯಕ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಟಿ.ಎ.ಪಿ.ಎಂ.ಸಿ.ಎಸ್. ಆವರಣದಲ್ಲಿ ಸಂಕಲ್ಪ ವಿಕಲಚೇತನರ ಒಕ್ಕೂಟ?ರಾಯಚೂರು ವತಿಯಿಂದ ನಡೆದ ವಿಶ್ವ ವಿಕಲಚೇತನರ ದಿನಾಚರಣೆ–2025 ಕಾರ್ಯಕ್ರಮವನ್ನು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಉದ್ಘಾಟಿಸಿ ಮಾತನಾಡಿ ರಾಜ್ಯ ಸರ್ಕಾರವು ವಿಕಲಚೇತನರಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ ಹಾಗೂ ವಿವಿಧ ಯೋಜನೆಗಳ ಮೂಲಕ ಅನುದಾನವನ್ನು ಕೂಡ ನೀಡುತ್ತಿದೆ ಅದ್ದರೆ ಅವುಗಳು ವಿಕಲಚೇತನರಿಗೆ ದೊರೆಯದೆ.**




ಇರುವುದಕ್ಕೆ ಮಾಹಿತಿ ಕೊರತೆಯು ಕೂಡ ಕಾರಣವಾಗಿರುವುದರಿಂದ ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು ವತಿಯಿಂದ ವಿಕಲಚೇತನರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದಕ್ಕಾಗಿ ಕಾರ್ಯಕ್ರಮವನ್ನು ಅಯೋಜಿಸಲಾಗಿದೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ವಿಕಲಚೇತನರಿಗೆ ದೊರೆಯುವ ಸೌಲಭ್ಯಗಳನ್ನು ತಲುಪಿಸುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಿದಾಗ ಮಾತ್ರ ವಿಕಲಚೇತನರು ಕೂಡ ಸ್ವವಲಂಭಿ ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ವಿಕಲಚೇತನರು ತಮ್ಮಲಿರುವ ಕೊರತೆಗಳಿಗೆ ಕೊರಗದೆ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡು ಉತ್ತಮ ಸಾಧನೆಯನ್ನು ತೋರಬೇಕು ಹಾಗೂ ಸಮಾಜ ಮುಖಿ ಕಾರ್ಯಕ್ರಮಗಳನ್ನು ಸಂಸ್ಥೆಯ ವತಿಯಿಂದ ಅಯೋಜಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಭಗವಂತ ಸಾಮಾನ್ಯ ವ್ಯಕ್ತಿಗಳಿಗಿಂತ ಹೆಚ್ಚಿನ ಸಾಮಾರ್ಥ್ಯವನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡಿರುತ್ತಾನೆ ಇಂದು ವಿಕಲಚೇತನರು ಎಲ್ಲಾ ರಂಗಗಳಲ್ಲಿಯು ಕೂಡ ಉತ್ತಮ ಸಾಧನೆಯನ್ನು ತೋರುತ್ತಿದ್ದಾರೆ ಪ್ಯಾರ ಓಲಂಪಿಕ್ ಕ್ರೀಡೆಗಳು ಇಂದು ಹೆಚ್ಚು ಜನಪ್ರಿಯವಾಗುತ್ತಿವೆ.ಅದ್ದರಿಂದ ಅತ್ಮವಿಶ್ವಸವನ್ನು ಕಳೆದುಕೊಳ್ಳದೆ ತಮ್ಮ ಬದುಕನ್ನು ಕಟ್ಟಿಕೊಳ್ಳುವಂತೆ ತಿಳಿಸಿದರು. ಹಿರಿಯ ಸಾಹಿತಿ ದೇವತರಾಜ್ ಎಸ್,ಬಪ್ಪೂರು ರವರು ವಿಶೇಷ ಉಪನ್ಯಾಸ ನೀಡಿದರು. ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಸೈಯಾದ್ ಸಜ್ಜದ್ ಹುಸೇನ್ ಮತವಾಲ್ ಸಾಹೆಬ್ ಹಾಗೂ ಕ್ರೈಸ್ತ ಧರ್ಮ ಗುರುಗಳಾದ ಸೇಂಟೆ ಮೇರಿಸ್ ಕ್ಯಾಥೋಲಿಕ್ ಚರ್ಚ್‌ನ ಫಾ.ಸುರೇಶ ವಿನ್ಸೆಂಟ್ ದಿವ್ಯಸಾನಿಧ್ಯ ವಹಿಸಿ ತಮ್ಮ ಸಂದೇಶವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಕಲಚೇತನರ ಸಬಲಿಕರಣ ಇಲಾಖೆಯ ಅಧಿಕಾರಿಗಳಾದ ವಿನೋದ ಕುಮಾರ, ಜೆ.ಡಿಎಸ್. ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಮೌನೇಶಗೌಡ .ಹೆಚ್, ಗುಮ್ಮ ಬಸವರಾಜ,ಸೈಯಾದ್ ಖಾದ್ರಿ, ಪಿ.ರವಿಕುಮಾರ, ರಾಘವೇಂದ್ರ, ಆಂಜನೇಯ್ಯ,ಸುಬಾನ್ ಬೇಗ್, ಸಂಕಲ್ಪ ವಿಕಲಚೇತನರ ಒಕ್ಕೂಟದ ರಾಜ್ಯ ಪ್ರತಿನಿಧಿಗಳು ಜಿಲ್ಲಾ ಗೌ.ಅಧ್ಯಕ್ಷರಾದ ದೇಸಾಯಿ ದೊತರಬಂಡಿ, ಜಿಲ್ಲಾಧ್ಯಕ್ಷರಾದ ಶಿವಕುಮಾರ ಚಲ್ಮಲ್, ಜಿಲ್ಲಾ ಉಪಧ್ಯಾಕ್ಷರಾದ ಸಾವಿತ್ರಮ್ಮ ಹೆಚ್.ಎಂ. ತಾಲೂಕು ಅಧ್ಯಕ್ಷರಾದ ಲಕ್ಷ್ಮೀ ಉಟಕನೂರು,ಸಿರವಾರ ತಾ. ಅಧ್ಯಕ್ಷರಾದ ಅಮರೇಶಪಾಟೀಲ್ ಚಾಗಭಾವಿ,ಚಂದ್ರಶೇಖರ ಸೇರಿದಂತೆ ಇನ್ನಿತರರು ಇದ್ದರು. ಮಾನ್ವಿ: ಪಟ್ಟಣದ ಟಿ.ಎ.ಪಿ.ಎಂ.ಸಿ.ಎಸ್. ಆವರಣದಲ್ಲಿ ಸಂಕಲ್ಪ ವಿಕಲಚೇತನರ ಒಕ್ಕೂಟ?ರಾಯಚೂರು ವತಿಯಿಂದ ನಡೆದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ಉದ್ಘಾಟಿಸಿದರು.

# ಕರ್ತವ್ಯ ಲೋಪ ಎಸಗಿದ ವೈದ್ಯರ ಮೇಲೆ ಕ್ರಮಕ್ಕೆ ಆಗ್ರಹಿಸಿ ಮನವಿ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಕರ್ತವ್ಯ ಲೋಪ ಎಸಗಿದ ಕಾರಣ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಶನಿವಾರ ತಹಸಿಲ್ದಾರ್ ಡಾ. ವಿನಯಾ ಹೂಗಾರ ಇವರ ಮೂಲಕ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.**


ಮನವಿ ಪತ್ರದಲ್ಲಿ ಡಿಸೆಂಬರ್ 13ರಂದು ಬೆಳಗಿನ ಜಾವ ಮೂರು ಗಂಟೆಯ ಸಮೀಪ ಪಟ್ಟಣದ ಬೇಪಾರಿ ಸಮಾಜದ ಯುವಕನೋರ್ವ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಕರೆತಂದಾಗ ಅಲ್ಲಿ ರಾತ್ರಿ ಅವಧಿಯಲ್ಲಿ ಸೇವೆ ಸಲ್ಲಿಸಬೇಕಾದ ವೈದ್ಯರು ತಮ್ಮ ಕರ್ತವ್ಯಕ್ಕೆ ಹಾಜರಾಗದೆ ಇರದ ಕಾರಣ ರೋಗಿಗೆ ಸಮಯಕ್ಕೆ ಪ್ರಾಥಮಿಕ ಸೂಕ್ತ ಚಿಕಿತ್ಸೆ ಸಿಗದ ಕಾರಣ ಮರಣವನ್ನು ಹೊಂದಿದ್ದಾನೆ ಎಂದು ಆರೂಪಿಸಲಾಗಿದ್ದು ವೈದ್ಯರ ಗೈರು ಹಾಜರಿ ಕುರಿತು ಅಧಿಕಾರಿಗಳು ಸಮರ್ಪಕ ಉತ್ತರವನ್ನು ನೀಡಿಲ್ಲ ಸರ್ಕಾರ ರೋಗಿಗಳಿಗೆ ಅನುಕೂಲವಾಗಲೆಂದು ಲಕ್ಷ ಗಟ್ಟಲೆ ಸಂಬಳವನ್ನು ಕೊಟ್ಟು ನೇಮಿಸಿಕೊಳ್ಳುತ್ತದೆ ಆದರೆ ಬಡಜನರಗಾಗಿ ಕೆಲಸ ಮಾಡಬೇಕಾದ ವೈದ್ಯರು ತಮ್ಮ ಕರ್ತವ್ಯ ಲೋಪದಿಂದ ಇಂಥ ದುರ್ಘಟನೆಗಳು ಸಂಭವಿಸಲು ಕಾರಣೀ ಕರ್ತರಾಗುತ್ತಿದ್ದಾರೆ.

ರಾತ್ರಿಯ ಅವಧಿಯ ಸೇವೆಯಲ್ಲಿ ಇರಬೇಕಾದ ತಜ್ಞ ವೈದ್ಯ ಇಲ್ಲದ ಕಾರಣ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಂಬಂಧ ಇಲ್ಲದ ವ್ಯಕ್ತಿ ರೋಗಿಗೆ ಚಿಕಿತ್ಸೆ ನೀಡಿರುವುದರಿಂದ ಈ ಗಂಭೀರ ಸಮಸ್ಯೆ ಉದ್ಭವ ವಾಗಿದೆ ಎಂದು ಆರೋಪಿಸಲಾಗಿದ್ದು ಜಿಲ್ಲಾಧಿಕಾರಿಗಳು ಇದರ ತನಿಖೆಗೆ ಆದೇಶಿಸಿ ಕರ್ತವ್ಯ ಲೋಪ ಎಸಗಿದ ವೈದ್ಯಾಧಿಕಾರಿಗಳ ಮೇಲೆ ಇಲಾಖಾವಾರು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ಮನವಿಗೆ ಕೂಡಲೇ ಸ್ಪಂದಿಸದಿದ್ದರೆ ಸಮುದಾಯ ಆರೋಗ್ಯ ಕೇಂದ್ರದ ಮುಂದೆ ತಾಳಿಕೋಟಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರೊಂದಿಗೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದಾಗಿ ತಿಳಿಸಲಾಗಿದೆ.ಈ ಸಮಯದಲ್ಲಿ ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈ ಭೀಮ ಮುತ್ತಗಿ, ಪದಾಧಿಕಾರಿಗಳಾದ ನಿಸಾರ ಬೇಪಾರಿ, ಅಬೂಬಕರ ಲಾಹೋರಿ, ಗುರುಪ್ರಸಾದ್ ಬಿಜಿ,ಕಾಶಿನಾಥ ಕಾರಗನೂರ,ನಬಿ ಲಾಹೋರಿ, ಶೌಕತ್ ಲಾಹೋರಿ, ಸುಭಾಸ ಅಗಸರ, ಪೀರಸಾ ಮತ್ತಿತರರು ಇದ್ದರು.

# ಪೂಜ್ಯ ಬಾಪು ಗ್ರಾಮೀಣ ರೋಜಗಾರ ಯೋಜನೆಯನ್ನಾಗಿ ಪುನರ್ ನಾಮಕರಣ :ಸ್ವಾಗತಾರ್ಹ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಡಿ 13 – ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರ ಪೂಜ್ಯ ಬಾಪು ಗ್ರಾಮೀಣ ರೋಜಗಾರ ಯೋಜನೆ ಯನ್ನಾಗಿ ಪುನರ್ ನಾಮಕರಣ ಮಾಡಿದೆ ಮಾನವ ದಿನಗಳ ಸಂಖ್ಯೆಯನ್ನು 100 ರಿಂದ 125ಕ್ಕೆ ಹೆಚ್ಚಿಸಲಾಗಿದೆ ಕನಿಷ್ಠ ವೇತನವನ್ನು 240ಗಳಿಗೆ ನಿಗದಿಗೊಳಿಸಲಾಗಿದೆ ಮಾನವ ದಿನಗಳ ಮತ್ತು ಕನಿಷ್ಠ ವೇತನ ಹೆಚ್ಚಿಸಬೇಕೆಂಬ ಬಹುದಿನಗಳ ಬೇಡಿಕೆಗೆ ಕೇಂದ್ರ ಸ್ಪಂದಿಸಿರುವುದು ಸ್ವಾಗತ ಅರ್ಹವಾಗಿದೆ. ಉದ್ಯೋಗ ಖಾತ್ರಿ ಯೋಜನೆಯ ಮಾನವ ದಿನ ಮತ್ತು ವೇತನ ಹೆಚ್ಚಳ ನಿರ್ಧಾರ ಮತ್ತೊಂದೆಡೆ ದೇಶದ ಆರ್ಥಿಕ ಬಿಕ್ಕಟ್ಟು ತೆರೆದಿಟ್ಟಂತಾಗಿದೆ ದೇಶದಲ್ಲಿ ನಿರುದ್ಯೋಗ ಅಧಿಕವಾಗಿದೆ ಎನ್ನುವುದಕ್ಕೆ ಕೇಂದ್ರದ ಈ ನಿರ್ಧಾರ ದಿಕ್ಸೂಚಿಯಾಗಿದೆ. ದೇಶದ ಆದ್ಯೋಗಿಕ ರಂಗದಲ್ಲಿ ಉದ್ಯೋಗದ ಕೊರತೆ ಮತ್ತು ಕೃಷಿ ರಂಗದ ಮೇಲೆ**



**ಕಾರ್ಮಿಕರ ಸಂಖ್ಯೆ ಹೆಚ್ಚಳದ ಹೊರೆ ಸ್ಪಷ್ಟ ಸೂಚಕವಾಗಿದೆ. ಔದ್ಯೋಗಿಕ ರಂಗದಲ್ಲಿ ಉದ್ಯೋಗದ ಕೊರತೆಯಾದ್ದರಿಂದ ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚಳ ಹೊರಗೆ ಕಾರಣವಾಗಿದ್ದು, ಇದು ದೇಶದ ಆರ್ಥಿಕ ಅಸಮತೋಲನ ಬೆಳವಣಿಗೆಯನ್ನು ಎತ್ತಿ ತೋರಿಸಿದೆ ಉದ್ದೇಶ ಯೋಜನೆಯನ್ನು 2005ರಲ್ಲಿ ಅಂದಿನ ಯುಪಿಎ ಸರ್ಕಾರ ಅನುಷ್ಠಾನಗೊಳಿಸಿತ್ತು ಆರಂಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಎಂದು ನಾಮಕರಣ ಮಾಡಲಾಗಿತ್ತು ನಂತರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ, ಕಾಯ್ದೆಯನ್ನಾಗಿ ಮರುನಾಮಕರಣ ಮಾಡಲಾಯಿತು ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

# ಗೃಹಲಕ್ಷ್ಮಿ ಯೋಜನೆಗೆ 1.28 ಕೋಟಿ ಮಹಿಳೆಯರ ನೋಂದಣಿ




❑ ನೈಜ್ಯ ದೆಸೆ ನ್ಯೂಸ್

**ಬೆಳಗಾವಿ: ಗೃಹಲಕ್ಷ್ಮಿ ಯೋಜನೆಯಡಿ ಇದುವರೆಗೂ ಒಟ್ಟು 52,416.17 ಕೋಟಿ ಹಣವನ್ನು ಡಿಬಿಟಿ ಮೂಲಕ ಫಲಾನುಭವಿಗಳಿಗೆ ಜಮೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ.**

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯಾದ್ಯಂತ ಗೃಹಲಕ್ಷ್ಮಿ ಯೋಜನೆಗೆ ಇದುವರೆಗೆ 1,28,59,073 ಕುಟುಂಬದ ಯಜಮಾನಿಯರು ನೋಂದಾಯಿಸಿಕೊಂಡಿದ್ದು, ಇದರಲ್ಲಿ 1,24,12,543 ಫಲಾನುಭವಿಗಳಿಗೆ ಒಟ್ಟು 52,416.17 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಡಿಬಿಟಿ ಮೂಲಕ ಜಮೆ ಮಾಡಲಾಗಿದೆ ಎಂದರು. ಅಂದರೆ ಇಲ್ಲಿ ಪ್ರತಿ ಫಲಾನುಭವಿಗಳಿಗೆ ತಲಾ ಎರಡು ಸಾವಿರ ರೂಪಾಯಿಯಂತೆ ಈವರೆಗೆ 22 ಕಂತುಗಳಲ್ಲಿ ಒಟ್ಟು 44,000 ರೂ.ಗಳನ್ನು ಪಾವತಿ ಮಾಡಲಾಗಿದೆ. ಈವರೆಗೆ 52,416.17 ಕೋಟಿ ರೂ. ಹಣವನ್ನು ಜಮೆ ಮಾಡಲಾಗಿದೆ ಎಂದು ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿದ ಫಲಾನುಭವಿಗಳ ಪೈಕಿ 1,44,056 ಮಂದಿ ಮರಣ ಹೊಂದಿದ್ದಾರೆ ಎಂಬ ಶಾಸಕ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದ್ದಾರೆ. ಗೃಹಲಕ್ಷ್ಮಿ ಯೋಜನೆಗೆ ದಾಖಲೆ ಸಂಖ್ಯೆಯಲ್ಲಿ ಮಹಿಳೆಯರು ನೋಂದಾಯಿಸಿಕೊಂಡಿರುವುದು ಸರ್ಕಾರದ ಜನಪರ ಬದ್ಧತೆಯನ್ನು ತೋರಿಸುತ್ತದೆ. ಸಣ್ಣ ಅವಧಿಯಲ್ಲಿಯೇ 1.24 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ಹಣ ಸಂದಾಯ ಮಾಡಿರುವುದು ಪ್ರಶಂಸನೀಯ. ಈ ಯೋಜನೆಯಿಂದ ರಾಜ್ಯದ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಣೆಗೊಳ್ಳಲು ದೊಡ್ಡ ಮಟ್ಟದ ಕೊಡುಗೆ ಸಿಕ್ಕಿದೆ. ಡಿಬಿಟಿ ಮೂಲಕ ನೇರವಾಗಿ ಹಣ ವರ್ಗಾವಣೆಯಾಗುತ್ತಿರುವುದು ಯೋಜನೆಗೆ ಪಾರದರ್ಶಕತೆಯನ್ನು ತಂದಿದೆ ಎಂದು ಶಾಸಕ ದಿನೇಶ್ ಗೂಳಿಗೌಡ ಹೇಳಿದ್ದಾರೆ.

# ದೇಶಿ ಸಾಹಿತ್ಯದ ತವರುಮನೆ ಗ್ರಾಮೀಣ ಪ್ರದೇಶ: ಡಾ. ಭಗವಂತರಾಯ ಬಳ್ಳೂಂಡಗಿ

❑ ನೈಜ್ಯ ದೆಸೆ ನ್ಯೂಸ್

**ಜೇವರ್ಗಿ: ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ ಉತ್ತಮ ಸಂಸ್ಕಾರ ಹಾಗೂ ಸೃಜನಶೀಲ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಪಟ್ಟಣದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಡಾ. ಭಗವಂತರಾಯ ಬಿ. ಬಳ್ಳೂಂಡಗಿ ಹೇಳಿದರು.**

ಅವರು ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಜೇವರ್ಗಿಯಲ್ಲಿ "ಸಾಲುಮರದ ತಿಮ್ಮಕ್ಕ ವೇದಿಕೆ" ಮೂಲಕ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರದ ಎರಡನೇ ಉಪನ್ಯಾಸ ಮಾಲಿಕೆಯಲ್ಲಿ "ದೇಶಿ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು" ಎಂಬ ವಿಷಯದ ಕುರಿತು ಮಾತನಾಡಿದರು.




ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಬಿಡುವಿನ ವೇಳೆಯಲ್ಲಿ ಕವಿತೆ, ಕಥೆ, ಕಾದಂಬರಿ, ಲಲಿತ ಪ್ರಬಂಧ, ಚುಟುಕು ಹಾಗೂ ನಾಟಕ ಸಾಹಿತ್ಯವನ್ನು ನಿತ್ಯ ನಿರಂತರವಾಗಿ ಓದುವ ಹವ್ಯಾಸ ಬೆಳೆಸಿಕೊಂಡರೆ ಉತ್ತಮ ಸಂಸ್ಕಾರಗಳ ಜೊತೆಗೆ ಭವಿಷ್ಯದಲ್ಲಿ ಉತ್ತಮ ಸಾಹಿತಿಗಳಾಗಲು ಸಾಧ್ಯವಿದೆ ಎಂದು ಅವರು ಹೇಳಿದರು. ದೇಶಿ ಸಾಹಿತ್ಯದ ತವರುಮನೆ ಗ್ರಾಮೀಣ ಪ್ರದೇಶವಾಗಿದ್ದು, ಹಳ್ಳಿಯ ಬದುಕು ಮತ್ತು ಮಾನವೀಯ ಮೌಲ್ಯಗಳೇ ಅದರ ಶಕ್ತಿ ಎಂದರು.

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಮಾತನಾಡಿದ ರಾಸಾಯನಿಕ ಶಾಸ್ತ್ರದ ಪ್ರಾಧ್ಯಾಪಕರಾದ ಸುರೇಶ್ ಗುಡ್ಡಿ ಅವರು, ದೇಶಿ ಸಾಹಿತ್ಯವು ನಿರ್ದಿಷ್ಟ ಪ್ರದೇಶ, ಸಂಸ್ಕೃತಿ ಹಾಗೂ ಭಾಷೆಗೆ ಸಂಬಂಧಿಸಿದ ಸಾಹಿತ್ಯವಾಗಿದ್ದು, ಶಿಷ್ಟ ಸಾಹಿತ್ಯಕ್ಕೆ ವಿರುದ್ಧವಾಗಿ ಪರಿಗಣಿಸಲಾಗುತ್ತದೆ ಎಂದರು. ಜನಪದ ಹಾಡುಗಳು, ಕಥೆಗಳು ಹಾಗೂ ಸ್ಥಳೀಯ ಭಾಷೆಯ ನೆಲೆಯಿಂದ ಈ ಸಾಹಿತ್ಯ ಬೆಳೆಯುತ್ತದೆ. ವಿದ್ಯಾರ್ಥಿಗಳು ಹಳ್ಳಿಯ ಪರಿಸರದಲ್ಲಿ ಬೆಳೆದವರಾಗಿರುವುದರಿಂದ ಅವರ ವ್ಯಕ್ತಿತ್ವದಲ್ಲಿಯೇ ದೇಶಿ ಸಾಹಿತ್ಯದ ಬೇರುಗಳು ಅಡಗಿವೆ ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ಉಪನ್ಯಾಸಕರಾದ ಡಾ. ಪಿಡ್ಡಪ್ಪ ಚನ್ನೂರು ಅವರು, ಸಾಹಿತ್ಯದ ಮೇಲೆ ಆಸಕ್ತಿ ಹೊಂದಿರುವವರು ತಮ್ಮ ಬದುಕಿನಲ್ಲಿ ಸೃಜನಶೀಲತೆಯನ್ನು ಬೆಳೆಸಿಕೊಳ್ಳಬಹುದು ಎಂದು ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು.

ಕಾರ್ಯಕ್ರಮಕ್ಕೆ ಪ್ರಾಂಶುಪಾಲರಾದ ಶಿವಶರಣಪ್ಪ ಅವರು ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಡಾ. ಸಿದ್ಧಲಿಂಗಪ್ಪ ನಂದೆಪ್ಪನವರ, ಪ್ರಶಾಂತ ಹಾಸು, ಡಾ. ದೇವೇಂದ್ರ ಗುಡೂರು, ಡಾ. ಈರಣ್ಣ ಹವಾಲ್ದಾರ, ಶ್ರೀಮತಿ ನೀತು ರಾಣಿ, ರೇವಣಸಿದ್ದಪ್ಪ ಬುರ್ಜಕ ಹಾಗೂ ಡಾ. ಗೋವಿಂದರಾಜ ಆಲ್ದಾಳ ಉಪಸ್ಥಿತರಿದ್ದರು. ಕು. ನಂದಿತಾ ಕಾರ್ಯಕ್ರಮ ನಿರೂಪಿಸಿದರು. ಕು. ಮಲ್ಲಮ್ಮ ಸ್ವಾಗತಿಸಿದರು. ಕು. ಶಾಂತಮ್ಮ ವಂದಿಸಿದರು.